ದೆಹಲಿ ಕರ್ನಾಟಕ ಸಂಘದ

# ಅಭಿಮತ

ಆಗಸ್ಟ್ 2015
ಬೆಲೆ ರೂ. 1



## ದೆಹಲಿಯಲ್ಲಿ ರಾತ್ರಿಯಿಡೀ ಯಕ್ಷಗಾನ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 25 ಸಂಚಿಕೆ 11
ಆಗಸ್ಟ್ 2015, ಬೆಲೆ ರೂ. 1



**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್ 9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತ: 9971121636
ಟಿ.ಎಂ. ಮೈಲಾರಪ್ಪ: 9013210175

**ಸಮಿತಿ ಸದಸ್ಯರು**
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ


## ನೇರ ಮಾತು

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನಾ ಸಮಾರಂಭದ ಸಂದರ್ಭ ಭೀಷ್ಮನಾಗಿ ಆಗಿನ ಕೇಂದ್ರ ಸಚಿವರಾದ ಮಾನ್ಯ ಆಸ್ಕರ್ ಫರ್ನಾಂಡಿಸ್ ಅವರು ಮತ್ತು ಕರ್ಣನಾಗಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಶ್ರೀಮಾನ್ ವೀರಪ್ಪ ಮೊಯಿಲಿಯವರು ಯಕ್ಷಗಾನದಲ್ಲಿ ಪಾತ್ರವಹಿಸಿ ದೇಶದ ರಾಜಧಾನಿಯಲ್ಲಿ ಯಕ್ಷಗಾನಕ್ಕೆ ಒಂದು ದೊಡ್ಡ ಪ್ರಚಾರವನ್ನು ಸಿಗುವಂತೆ ಮಾಡಿದ್ದರು. ದೇಶ ವಿದೇಶಗಳ ವಿವಿಧ ಮಾಧ್ಯಮಗಳು, ರಾಜಧಾನಿಯ ಹಿಂದಿ ಪತ್ರಿಕೆಗಳು ನೇತಾ ಬನ್‌ಗಯಾ ಅಭಿನೇತಾ ಎಂದು ಶ್ಲಾಘಿಸಿದ್ದವು.

ಇದೀಗ ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವ ಆಚರಣೆಯ ವಿಶೇಷ ಸಂದರ್ಭದಲ್ಲಿ ದೆಹಲಿಯ ಸೌತ್ ಕೆನರಾ ಕ್ಲಬ್ ಮತ್ತು ತೆಂಕುಘಾತಿಟ್ಟು ಯಕ್ಷಗಾನ ಅಕಾಡೆಮಿ ಜಂಟಿಯಾಗಿ ಸಂಘದ ಸಹಕಾರದೊಂದಿಗೆ ರಾತ್ರಿಯಿಡೀ 'ಸಂಪೂರ್ಣ ಶ್ರೀದೇವಿ ಮಹಾತ್ಮೆ' ಎನ್ನುವ ಕಥಾ ಪ್ರಸಂಗವನ್ನು ಯಶಸ್ವಿಯಾಗಿ ಆಯೋಜಿಸಿದ್ದರು. ಒಂದು ಕಡೆ ರಾಜಧಾನಿಯಲ್ಲಿ ಪ್ರಪ್ರಥಮವಾಗಿ ಈ ರೀತಿಯ ಒಂದು ಪ್ರಯೋಗ ದಾಖಲೆಯಾಯಿತು. ಕರ್ನಾಟಕದ ಯಕ್ಷಗಾನದ 35 ಜನ ಮೇರು ಕಲಾವಿದರ ತಂಡವೊಂದನ್ನು ಒಂದೇ ವೇದಿಕೆಯಲ್ಲಿ ಕಾಣುವ ಭಾಗ್ಯ ನನ್ನಂತಹ ಯಕ್ಷಗಾನದ ಅಭಿಮಾನಿಗೆ ಸಿಕ್ಕಿದೆ. ಬಹುಶಃ ನನ್ನೂರಲ್ಲಿ ಇರುತ್ತಿದ್ದರೂ ಈ ರೀತಿಯ ಒಂದು ತಂಡ ಮತ್ತು ವ್ಯವಸ್ಥೆಯನ್ನು ಕಾಣುವುದು ಸಾಧ್ಯವಾಗುತ್ತಿರಲಿಲ್ಲ.

ರಾತ್ರಿಯಿಂದ ಬೆಳಗ್ಗಿನವರೆಗೆ ಸಂಘದ ರಂಗಮಂದಿರದಲ್ಲಿ ಆಗಿರುವ ಪ್ರಪ್ರಥಮ ಪ್ರಯೋಗ ನಾನು ಅಧ್ಯಕ್ಷನಾಗಿದ್ದ ಸಂದರ್ಭ ನಡೆದಿದೆ, ಅದಕ್ಕೆ ನಾನು ಸಾಕ್ಷಿಯಾಗಿದ್ದೆ ಎನ್ನುವುದು ನನ್ನ ಜೀವನದ ಮಹತ್ತರ ಹಲವು ನೆನಪುಗಳಲ್ಲಿ ಇದೂ ಒಂದು ದಾಖಲಾಗಿದೆ.

ಇನ್ನೊಂದೆಡೆ ಒಂದು ಕಾರ್ಯಕ್ರಮದ ವ್ಯವಸ್ಥೆ ಮತ್ತು ಅದರ ಮಟ್ಟ ಹೇಗಿರಬೇಕು ಎನ್ನುವ ಸ್ಪಷ್ಟ ಕಲ್ಪನೆ ಮತ್ತು ಪಾಠವನ್ನು ಈ ಯಕ್ಷಗಾನ ಪ್ರಯೋಗದಿಂದ ಒಬ್ಬ ಸಂಘಟಕನಾಗಿ ನಾನು ಕಲಿತಿದ್ದೇನೆ, ತಿಳಿದುಕೊಂಡಿದ್ದೇನೆ. ಪ್ರತಿಯೊಬ್ಬ ಕಲಾವಿದರನ್ನು ನೋಡಿಕೊಂಡ ಪರಿ, ಅವರೊಂದಿಗೆ ಸ್ಪಂದಿಸಿದ ಗೌರವಾನ್ವಿತ ನುಡಿ, ರಂಗದ ಹಿಂದೆ ಮತ್ತು ಮುಂದೆ ಯಕ್ಷಗಾನದ ಶಿಸ್ತು, ಪ್ರೇಕ್ಷಕರನ್ನು ಆದರದಿಂದ ಕಂಡುಕೊಂಡ ಸ್ವಯಂ ಸೇವಕರು, ಎಲ್ಲವೂ ಶ್ಲಾಘನೀಯ... ಡಾ. ಪುರುಷೋತ್ತಮ ಬಿಳಿಮಲೆಯವರ ಮಾರ್ಗದರ್ಶನ, ಶ್ರೀಮತಿ ವಿದ್ಯಾ ಕೋಳ್ಯೂರು ಮತ್ತು ಸರವು ಕೃಷ್ಣ ಭಟ್ಟರ ಸಂಯೋಜನೆ, ಬಾಲಕೃಷ್ಣ ನಾಯ್ಕ್, ಪ್ರಕಾಶ್ ಶೆಟ್ಟಿ ಉಳೆಪಾಡಿ, ಎಂ. ಶಿವರಾಮ ರೈ, ಕೆ.ಆರ್. ರಾಮಮೂರ್ತಿ, ಕೆ.ಎಸ್.ಜಿ. ಶೆಟ್ಟಿಯವರ ಯೋಚನೆ ಮತ್ತು ಯೋಜನೆ ಹಾಗೂ ಎಲ್ಲಾ ಕಲಾ ಪ್ರೇಮಿಗಳ ಒಂದುಗೂಡುವಿಕೆಯ ಪ್ರಯತ್ನ, ಎಲ್ಲವೂ ಅಭಿನಂದನೀಯ. ದೆಹಲಿ ಕರ್ನಾಟಕ ಸಂಘಕ್ಕೆ ಬರುವ ಎಲ್ಲಾ ಕಲಾವಿದರನ್ನು ಅತಿಥಿಗಳನ್ನು ನಾವು ಈ ರೀತಿ ಗೌರವಿಸಿ ಕಾರ್ಯಕ್ರಮ ಆಯೋಜಿಸಿದಾಗ ಸಾಂಸ್ಕೃತಿಕ ಸಮುಚ್ಚಯ'ಎನ್ನುವ ಪದ ಅರ್ಥಪೂರ್ಣವಾಗುತ್ತದೆ ಎಂದುಕೊಂಡಿದ್ದೇನೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ದೆಹಲಿ ಕರ್ನಾಟಕ ಸಂಘವು ಸಾಲು ಸಾಲಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದರ ಜೊತೆಗೆ ದೆಹಲಿಯ ಸ್ಥಳೀಯ ಸಂಘ ಸಂಸ್ಥೆಗಳು ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಜನಕಪುರಿ ಕನ್ನಡ ಕೂಟ ಜೊತೆ ಸೇರಿ ಶ್ರೀ ಗುರುಪಂಡಿತ ಪುಟ್ಟರಾಜ ಸಾಂಸ್ಕೃತಿಕ ಜನಪದ ಕಲಾ ಯುವಕ ಸಂಘ, ಸಿಂಧನೂರು, ರಾಯಚೂರು ತಂಡದ ಕಲಾವಿದರು ಪ್ರಸ್ತುತಪಡಿಸಿದ ಜಾನಪದ ಮತ್ತು ಭಕ್ತಿಗೀತೆಗಳ ಸಂಗಮ ಕಾರ್ಯಕ್ರಮವನ್ನು ಬಿ.ಕೆ. ಬಸವರಾಜು, ಗಂಗಾಧರ್ ಮತ್ತು ಚಂದ್ರಶೇಖರ್ ಎನ್.ಪಿ.ಯವರು ನಡೆಸಿಕೊಟ್ಟರು.

ಜುಲೈ 11ರ ರಾತ್ರಿ ತೆಂಕುತಿಟ್ಟಿನ ಸುಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ನಡೆದ "ಸಂಪೂರ್ಣ ಶ್ರೀದೇವೀ ಮಹಾತ್ಮೆ" ಒಂದು ಹೊಸ ದಾಖಲೆಯನ್ನು ನಿರ್ಮಿಸಿದೆ. ಇಡೀ ರಾತ್ರಿ ನಡೆದ ಯಕ್ಷಗಾನ ಕಾರ್ಯಕ್ರಮದಲ್ಲಿ ಸುಮಾರು 500ಕ್ಕೂ ಹೆಚ್ಚು ಪ್ರೇಕ್ಷಕರು ರಾತ್ರಿಯಿಡೀ ಯಕ್ಷಗಾನವನ್ನು ವೀಕ್ಷಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ. ಡಾ. ಪುರುಷೋತ್ತಮ ಬಿಳಿಮಲೆ, ಶ್ರೀಮತಿ ವಿದ್ಯಾ ಕೋಳ್ಯೂರು, ಎಸ್. ಕೃಷ್ಣ ಭಟ್, ಬಾಲಕೃಷ್ಣ ನಾಯ್ಕ್, ಪ್ರಕಾಶ್ ಶೆಟ್ಟಿ ಉಳೆಪಾಡಿ, ಡಾ. ಅವನೀಂದ್ರನಾಥ್ ರಾವ್ ವೈ, ಕೆ.ಆರ್. ರಾಮಮೂರ್ತಿ, ಕೆ.ಎಸ್.ಜಿ. ಶೆಟ್ಟಿಯವರು ಶ್ರಮಿಸಿದ್ದಾರೆ. ಸೌತ್ ಕೆನರಾ ಕ್ಲಬ್, ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನ, ದೆಹಲಿ ತುಳುಸಿರಿ, ಬಿಲ್ಲವರ ಅಸೋಸಿಯೇಶನ್, ಬಂಟ್ಸ್ ಕಲ್ಚರಲ್ ಅಸೋಸಿಯೇಶನ್ ಮತ್ತು ದೆಹಲಿಯ ಸ್ಥಳೀಯ ಸಂಘ ಸಂಸ್ಥೆಗಳು ಸಹಕಾರವನ್ನು ನೀಡಿದೆ. ಈ ಎಲ್ಲಾ ಸಂಸ್ಥೆಗಳಿಗೆ ಧನ್ಯವಾದಗಳು.

ಆಗಸ್ಟ್ 16 ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಜೊತೆ ಸೇರಿ ಸಮರ್ಥನಂ ಅಂಗವಿಕಲರ ಸಂಸ್ಥೆಯ ವಿಶೇಷ ಕಲಾವಿದರಿಂದ ಸುಗಮ ಸಂಗೀತ ಮತ್ತು ನೃತ್ಯರೂಪಕ, ಆಗಸ್ಟ್ 29 ಮತ್ತು 30ರಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತು ಬೆಂಗಳೂರು ಜೊತೆ ಸೇರಿ ಮೈಸೂರು ಮಲ್ಲಿಗೆ, ಕವಿಯ ನೋಡಿ–ಕವಿತೆ ಕೇಳಿ, ಜಾನಪದ ಗೀತೆಗಳು ಮತ್ತು ಚಿತ್ರಗೀತೆಗಳ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಶ್ರೀ ವೈ.ಕೆ. ಮುದ್ದುಕೃಷ್ಣ, ಶ್ರೀ ಮುದ್ದುಮೋಹನ್, ಶ್ರೀ ಕಿಕ್ಕೇರಿ ಕೃಷ್ಣಮೂರ್ತಿ, ಶ್ರೀಮತಿ ಬಿ.ಕೆ. ಸುಮಿತ್ರ ಅಲ್ಲದೆ ಹೆಸರಾಂತ 35 ಕಲಾವಿದರು ಕಾರ್ಯಕ್ರಮ ನೀಡಲಿದ್ದಾರೆ.

ಈ ಕಾರ್ಯಕ್ರಮ ದಶಮಾನೋತ್ಸವ ಸಮಾರೋಪದ ಅಂಗವಾಗಿ ನಡೆಯುತ್ತಿದ್ದು 29ರಂದು ಜೆ.ಎಸ್.ಎಸ್., ಸಭಾಂಗಣ ನೋಯ್ಡಾದಲ್ಲಿ ಸುಗಮ ಸಂಗೀತ ಹಾಗೂ ಸಮೂಹ ನೃತ್ಯ ಕಾರ್ಯಕ್ರಮ ಮತ್ತು 30ರಂದು ದೆಹಲಿ ಕರ್ನಾಟಕ ಸಂಘದ ಸ್ಥಳೀಯ ಕಲಾವಿದರಿಂದ ಜಾನಪದ ಸಮೂಹ ನೃತ್ಯ ಮತ್ತು ಜಾನಪದ ಸಮೂಹ ಹಾಡುಗಳು ಹಾಗೂ ಅಭಿನಂದನಾ ಕಾರ್ಯಕ್ರಮಗಳು ನಡೆಯಲಿವೆ. ಸಮಾರೋಪ ಕಾರ್ಯಕ್ರಮಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀಮತಿ ಉಮಾಶ್ರೀ, ಕೇಂದ್ರದ ಮಂತ್ರಿಗಳು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರುಗಳು ಪಾಲ್ಗೊಳ್ಳಲಿದ್ದಾರೆ. ಬನ್ನಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸೋಣ. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

## ದೆಹಲಿ ಕರ್ನಾಟಕ ಸಂಘದಲ್ಲಿ
# ತಿಂಗಳ ಕಾರ್ಯಕ್ರಮ

**15 ಆಗಸ್ಟ್ 2015 ಶನಿವಾರ ಬೆಳಿಗ್ಗೆ : 8.00 ಗಂಟೆಗೆ**

ಸ್ವಾತಂತ್ರ್ಯ ದಿನಾಚರಣೆ : ಧ್ವಜಾರೋಹಣ

**16 ಆಗಸ್ಟ್ 2015 ಭಾನುವಾರ ಸಂಜೆ : 5.00 ಗಂಟೆಗೆ**

ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿ ಸಹಯೋಗದೊಂದಿಗೆ ಸಮರ್ಥನಂ ಅಂಗವಿಕಲರ ಸಂಸ್ಥೆಯ ವಿಶೇಷ ಕಲಾವಿದರಿಂದ 'ಸುಗಮ ಸಂಗೀತ ಮತ್ತು ನೃತ್ಯ ರೂಪಕ

**29 ಆಗಸ್ಟ್ 2015 ಶನಿವಾರ ಸಂಜೆ : 5.00 ಗಂಟೆಗೆ**

ಕರ್ನಾಟಕ ಸುಗಮ ಸಂಗೀತ ಪರಿಷತ್ತು ಬೆಂಗಳೂರು ಮತ್ತು ದೆಹಲಿ ಕರ್ನಾಟಕ ಸಂಘ ಸಹಯೋಗದೊಂದಿಗೆ ಗೀತ-ಸಂಗೀತ-ನೃತ್ಯ ಕಾರ್ಯಕ್ರಮ. ಸ್ಥಳ: ಜೆ.ಎಸ್.ಎಸ್., ಇಂಜಿನಿಯರಿಂಗ್ ಕಾಲೇಜು, ಸಭಾಂಗಣ, ಸೆಕ್ಟರ್-62, ನೋಯ್ಡಾ

## ಸುಗಮ ಸಂಗೀತ ಮತ್ತು ದಶಮಾನೋತ್ಸವ ಸಾಂಸ್ಕೃತಿಕ ಕಾರ್ಯಕ್ರಮಗಳು

**30 ಆಗಸ್ಟ್ 2015 ಭಾನುವಾರ ಬೆಳಿಗ್ಗೆ : 10.00 ಗಂಟೆಗೆ**

ಕರ್ನಾಟಕ ಸುಗಮ ಸಂಗೀತ ಪರಿಷತ್ತು ಬೆಂಗಳೂರು ತಂಡದಿಂದ 'ಮೈಸೂರು ಮಲ್ಲಿಗೆ', 'ಕವಿಯ ನೋಡಿ-ಕವಿತೆ ಕೇಳಿ', 'ಜಾನಪದ ಗೀತೆಗಳು', ಮತ್ತು 'ಕವಿ ಚಿತ್ರ ಗೀತೆಗಳು'

ಸಂಘದ ಕಲಾವಿದರಿಂದ ಜಾನಪದ ಸಮೂಹ ನೃತ್ಯ ಮತ್ತು ಜಾನಪದ ಸಮೂಹ ಹಾಡುಗಳು ಮತ್ತು ಅಭಿನಂದನೆ

## ತಿಂಗಳ ನಾಟಕ : ಮಧುರ ಮಿಲನ

**4 ಸೆಪ್ಟೆಂಬರ್ 2015 ಶುಕ್ರವಾರ ಸಂಜೆ : 5.00 ಗಂಟೆಗೆ**

ಜನಕಪುರಿ ಮಹಿಳಾ ಮಂಡಳಿ ಪ್ರಸ್ತುತಪಡಿಸುವ, ಶ್ರೀಮತಿ ಸವಿತಾ ಇನಾಮದಾರ್ ರಚನೆ ಮತ್ತು ನಿರ್ದೇಶನದ ನಾಟಕ : ಮಧುರ ಮಿಲನ

## ನಾಟಕ-ರಕ್ತರಾತ್ರಿ

**13 ಸೆಪ್ಟೆಂಬರ್ 2015 ಭಾನುವಾರ ಸಂಜೆ : 5.00 ಗಂಟೆಗೆ**

ಕನ್ನಡದ ಷೇಕ್ಸ್‌ಪಿಯರ್ ಬಿರುದಾಂಕಿತ ಕಂದಗಲ್ ಹನುಮಂತರಾಯರ 'ರಕ್ತರಾತ್ರಿ' ನಾಟಕದ ಆಯ್ದ ಭಾಗ. ಪ್ರಸ್ತುತಿ: ದಿನಕರ, ನಿರ್ದೇಶನ : ಶಿವಾನಂದ ಇಂಗಳೇಶ್ವರ

## ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವದ ಅಂಗವಾಗಿ

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವ ಸಮಾರಂಭದ ಸಮಾರೋಪ ಕಾರ್ಯಕ್ರಮವನ್ನು ಆಗಸ್ಟ್ ತಿಂಗಳ 30ರಂದು ನಡೆಸಲು ಉದ್ದೇಶಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಜಾನಪದ ಸಮೂಹ ನೃತ್ಯ ಮತ್ತು ಜಾನಪದ ಸಮೂಹ ಹಾಡುಗಳನ್ನು ನೀಡಲಿಚ್ಛಿಸುವ ಸಂಘದ ಸದಸ್ಯರು ತಮ್ಮ ತಂಡದ ಹೆಸರುಗಳನ್ನು ಸಂಘದಲ್ಲಿ 15.08.2015ರೊಳಗಾಗಿ ನೋಂದಾಯಿಸಬೇಕಾಗಿ ವಿನಂತಿ.

ಪ್ರತೀ ತಂಡದಲ್ಲಿ ಕನಿಷ್ಠ 6ಜನ ಇರಬೇಕು. ಒಬ್ಬರಿಗೆ ಒಂದು ತಂಡದಲ್ಲಿ ಮಾತ್ರ ಭಾಗವಹಿಸಲು ಅವಕಾಶ.

ಪ್ರಥಮವಾಗಿ ನೋಂದಾಯಿಸಿಕೊಂಡ 20 ತಂಡಕ್ಕೆ ಮಾತ್ರ ಅವಕಾಶ. ಜಾನಪದ ಸಮೂಹ ನೃತ್ಯ ತಂಡಕ್ಕೆ ಮಾತ್ರ ರೂ. 5000/-ದಂತೆ ಗೌರವ ಧನವನ್ನು ನೀಡಲಾಗುವುದು.

## ಸಂಘದಲ್ಲಿ ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮ

**15 ಆಗಸ್ಟ್ 2015 ಶನಿವಾರ ಸಂಜೆ : 5.00 ಗಂಟೆಗೆ**

ಸಂಗೊಳ್ಳಿ ರಾಯಣ್ಣ ಜನ್ಮದಿನ ಕಾರ್ಯಕ್ರಮ. ಸ್ಥಳ : ಸಂಘದ ಸೆಮಿನಾರ್ ಹಾಲ್, ಆಯೋಜನೆ : ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗ

**2 ಸೆಪ್ಟೆಂಬರ್ 2015 ಬುಧವಾರ ಮಧ್ಯಾಹ್ನ : 2.00 ಗಂಟೆಗೆ**

ಶ್ರೀ ಬಸವೇಶ್ವರ ಮಹಿಳಾ ಸಾಂಸ್ಕೃತಿಕ ಕಲಾ ಮಂಡಳಿ, ಬೆಂಗಳೂರು ತಂಡದಿಂದ "ಶ್ರೀಕೃಷ್ಣ ವಿಜಯ" ಪೌರಾಣಿಕ ನಾಟಕ

**5 ಸೆಪ್ಟೆಂಬರ್ 2015 ಶನಿವಾರ ಸಂಜೆ : 6.00 ಗಂಟೆಗೆ**

ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿ ಮಠ, ಆರ್.ಕೆ.ಪುರಂ, ಸಹಯೋಗದೊಂದಿಗೆ ಸೂರ್ಯ ಕಲಾವಿದರಿಂದ ನೃತ್ಯರೂಪಕ

**6 ಸೆಪ್ಟೆಂಬರ್ 2015 ಭಾನುವಾರ ಬೆಳಿಗ್ಗೆ : 9.30 ಗಂಟೆಗೆ**

ಸಂಗೊಳ್ಳಿ ರಾಯಣ್ಣ ಸಾಂಸ್ಕೃತಿಕ ಉತ್ಸವ ದಿನಪೂರ್ತಿ ವಿಶೇಷ ಕಾರ್ಯಕ್ರಮಗಳು

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 16 ಆಗಸ್ಟ್, 2015ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 16 ಆಗಸ್ಟ್, 2015ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 30 ಆಗಸ್ಟ್, 2015 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 30 ಆಗಸ್ಟ್, 2015 ರಂದು ಸಾಯಂಕಾಲ 4 ಗಂಟೆಯಿಂದ.

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿ. ಫೋನ್ : 8860848585 – 011-26109615, 26104818**



# ಸಾಹಿತಿ ಎಂ.ಎಂ. ಕಲಬುರ್ಗಿಯವರೊಂದಿಗೆ ಸಾಹಿತ್ಯ ಸಂಜೆ

ದೆಹಲಿ ಕರ್ನಾಟಕ ಸಂಘವು ಇದೇ ಜುಲೈ 19ರಂದು ನಡೆಸಿದ ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಹಾಗೂ ಕರ್ನಾಟಕದ ಪ್ರಸಿದ್ಧ ವಿದ್ವಾಂಸರಲ್ಲೊಬ್ಬರಾದ ಡಾ. ಎಂ.ಎಂ. ಕಲಬುರ್ಗಿ ಹಾಗೂ ಬೆಂಗಳೂರಿನ ಬಸವ ಸಮಿತಿ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರು ಭಾಗವಹಿಸಿದ್ದರು.

ಡಾ. ಎಂ.ಎಂ. ಕಲಬುರ್ಗಿಯವರು ಮಾತನಾಡುತ್ತಾ ಇಂಗ್ಲೀಷ್ ಎನ್ನುವುದು ಜ್ಞಾನ ಮತ್ತು ತಂತ್ರಜ್ಞಾನದ ಭಾಷೆ, ಅದರ ಪ್ರಭಾವದಿಂದ ಕನ್ನಡದ ಅಳಿವಿನ ಆತಂಕ ಇಂದು ಬಹಳವಾಗಿದೆ. ಎಂಬ ಅಳಲನ್ನು ವ್ಯಕ್ತಪಡಿಸಿದರು. ವಚನ ಸಾಹಿತ್ಯ ಕನ್ನಡಿಗರು ಜಗತ್ತಿಗೆ ಕೊಟ್ಟ ದೊಡ್ಡ ಕೊಡುಗೆ ಎಂಬ ವಿಚಾರವನ್ನು ತಿಳಿಸಿದರು.

ಹರಿಹರ, ಕುಮಾರವ್ಯಾಸರು, ಬರೆಯುತ್ತಾರೆ, ಬದುಕುತ್ತಾರೆ. ಹಾಗೆಯೇ ಪಂಪ ಬರೆಯುತ್ತಾನೆ, ಬದುಕುವುದಿಲ್ಲ. ಆದರೆ ಬಸವಣ್ಣನವರು ಸಮಾಜದ ಮೇಲೆ ಪ್ರಭಾವ ಬೀರುತ್ತಾರೆ, ಬದುಕುತ್ತಾರೆ, ಬರೆಯುತ್ತಾರೆ ಎಂಬ ತಮ್ಮ ಅಧ್ಯಯನದ ಅರಿವಿನ ಮಹತ್ತರ ಸಂಗತಿಯನ್ನು ತೆರೆದಿಟ್ಟರು. ಭಕ್ತಿ ಎನ್ನುವ ಅರ್ಥ ಬಹಳ ಸೀಮಿತ, ಆದರೆ ಶರಣರನ್ನು ನಾವು ಗಮನಿಸಿದಾಗ ಅಲ್ಲಿ ನಾವು ಆತ್ಮ ಕಲ್ಯಾಣದ ಜೊತೆಯಲ್ಲೇ ಸಮಾಜದ ಕಲ್ಯಾಣಕ್ಕಾಗಿ ಹಾತೊರೆಯುವುದನ್ನು ನಾವು ಕಾಣಬಹುದು. ಆದ್ದರಿಂದಲೇ ನಮ್ಮ ಹಿರಿಯರು "ಲಕ್ಷಕ್ಕೊಬ್ಬ ಭಕ್ತ ಕೋಟಿಗೊಬ್ಬ ಶರಣ" ಎಂದು ಹೇಳಿರುವುದು. ನಾವು ಕ್ರಿಯೆಯಿಂದ ಜ್ಞಾನವೋ ಜ್ಞಾನದಿಂದ ಕ್ರಿಯೆಯೋ? ಎಂಬ ಪ್ರಶ್ನೆಯ ಮೇಲೆ ಯೋಚಿಸುವಾಗ ಅಡವಿಯೊಳಗೆ ಜ್ಞಾನ ಬೆಳೆಯುವುದಿಲ್ಲ ಜನರ ಮಧ್ಯದೊಳಿದ್ದು ಜ್ಞಾನ ಪಡೆದು ಅದನ್ನು ಸಮಾಜಕ್ಕೆ ತಲುಪಿಸಬೇಕಾಗುತ್ತದೆ ಎಂಬ ಅಂಶವನ್ನು ಮನಮುಟ್ಟುವಂತೆ ತಿಳಿಸಿದರು. 120 ಭಾಷಾಂತರಕಾರರು ವಚನಗಳ ಭಾಷಾಂತರಕ್ಕಾಗಿ ದುಡಿಯುತ್ತಿರುವುದು ವಚನಗಳ ಮಹತ್ವವನ್ನು ನಮಗೆ ತಿಳಿಸುತ್ತದೆ ಎಂದು ಹೇಳುತ್ತಾ ವಚನಗಳಲ್ಲಿರುವ ಅತೀತವಾದ ಮೌಲ್ಯಗಳ ಬಗ್ಗೆ ತಿಳಿಸಿದರು.

ಸಂಶೋಧನಾ ವಿಚಾರವಾಗಿ ಮಾತನಾಡುತ್ತಾ "ಸಮಾಜದ ಕಣ್ಣು ತೆರೆಸುವುದಕ್ಕಾಗಿ ಸಂಶೋಧನೆ ಅತ್ಯಗತ್ಯ" ಹಾಗೂ ಸಂಶೋಧನೆಯೂ ಪರಂಪರೆಯನ್ನು ತಿಳಿದುಕೊಳ್ಳುವುದಕ್ಕಾಗಿ ಅಲ್ಲ ಬದಲಾಗಿ ವರ್ತಮಾನವನ್ನು ತಿದ್ದುಕೊಳ್ಳಲು ಅತೀ ಅವಶ್ಯಕವಾಗಿದೆ. ಹಿಂದಿನದೆಲ್ಲಾ ಸರಿಯಿದೆ ಎನ್ನುವ ಹಾಗೆ ನಾವು ಪರದೆ ಸರಿಸುವ ಕೆಲಸವನ್ನು ಸಂಶೋಧಕ ಮಾಡಬೇಕಾಗಿದೆ. ಚರಿತ್ರೆ ಎನ್ನುವುದು ಹಳತು ಮತ್ತು ಹೊಸತರ ನಡುವಿನ ಸಂವಾದ ಎಂಬ ಸಂಶೋಧನೆಯ ಮೇಲಿನ ಮಹತ್ತರ ವಿಚಾರವನ್ನು ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ಹಂಚಿಕೊಂಡರು.

ಸಾಹಿತ್ಯ ಸಂವಾದದಲ್ಲಿ ಸಾಹಿತ್ಯಾಸಕ್ತರು ಎತ್ತಿದ ಪ್ರಶ್ನೆಗಳಿಗೆ ಡಾ. ಎಂ.ಎಂ. ಕಲಬುರ್ಗಿಯವರು ಉತ್ತರಿಸುತ್ತಾ "ನಾವು ಇಂದು ಬಹು ಭಾಷಾ ಸಂದರ್ಭದಲ್ಲಿ ಬದುಕುತ್ತಿದ್ದೇವೆ. ಬೇರೆ ಭಾಷೆಗಳನ್ನು ಕಲಿಯುವುದರ ಜೊತೆಗೆ ಕನ್ನಡದ ಮೇಲಿನ ಸ್ವಾಭಿಮಾನವನ್ನು ಉಳಿಸಿಕೊಳ್ಳಬೇಕು. ಎಲ್ಲದಕ್ಕೂ ನಾವು ಸರ್ಕಾರಗಳನ್ನು ದೂಷಿಸಬಾರದು. ಮೊದಲು ನಾವು ನಮ್ಮ ಮಕ್ಕಳಿಗೆ ಭಾಷೆ, ಪರಂಪರೆ, ಸಂಸ್ಕೃತಿಯ ಬಗ್ಗೆ ತಿಳಿಸಿಕೊಡಬೇಕು ಆಗ ಮಾತ್ರ ಕನ್ನಡ ಉಳಿಯುತ್ತದೆ ಬೆಳೆಯುತ್ತದೆ ಎಂಬ ಅಂಶವನ್ನು ಮನದಟ್ಟು ಮಾಡಿಕೊಟ್ಟರು.

ದೆಹಲಿ ಕರ್ನಾಟಕ ಸಂಘಕ್ಕೆ ನಾನು ಬರುತ್ತಿರುವುದು ಮೊದಲನೆ ಬಾರಿ ಆದರೂ ಈ ಹೊರನಾಡ ಸಂಘದ ಬಗ್ಗೆ ಅದರ ಇತಿಹಾಸ ಹಾಗೂ ಪ್ರಗತಿಯ ಬಗ್ಗೆ ತಕ್ಕಮಟ್ಟಿಗೆ ಗೊತ್ತಿದೆ ಹಾಗೂ ಡಾ. ಪುರುಷೋತ್ತಮ ಬಿಳಿಮಲೆಯವರು ಅಧ್ಯಕ್ಷರಾಗಿ ಮಾಡಿದ ಕೆಲಸಗಳು ಶ್ಲಾಘನೀಯ ಹಾಗೂ ಕರ್ನಾಟಕದ ಹೊರಗಿದ್ದುಕೊಂಡು ನೀವೆಲ್ಲರೂ ಕನ್ನಡ ನಾಡು ನುಡಿಯ ಬಗ್ಗೆ ಚಿಂತಿಸುತ್ತಿರುವುದಕ್ಕೆ ನಿಮಗೆಲ್ಲರಿಗೂ ಅಭಿನಂದನೆಗಳು. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಯುವಕರಿಗೆ ಕನ್ನಡದ ಮೇಲಿನ ಅಭಿಮಾನ ಮತ್ತು ಸ್ವಾಭಿಮಾನ ಕುಸಿಯುತ್ತಾ ಬಂದು ಅದರ ವೇಗ ಇನ್ನೂ ಹೆಚ್ಚಾಗಿದೆ. ಆದ್ದರಿಂದ ನಾವುಗಳು ನಮ್ಮ ಮಕ್ಕಳಿಗೆ ನಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಇತಿಹಾಸದ ಬಗ್ಗೆ ಮನವರಿಕೆ ಮಾಡಿಕೊಡಲೇಬೇಕಾದ ಅತ್ಯಗತ್ಯತೆಯ ಬಗ್ಗೆ ಹೇಳಿದರು.

ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬಸವ ಸಮಿತಿಯ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರು ಮಾತನಾಡುತ್ತಾ ಭಾರತದ ಸಂವಿಧಾನ ಅಂಗೀಕರಿಸಿದ ಎಲ್ಲಾ ಭಾಷೆಗಳಿಗೂ ವಚನಗಳನ್ನು ಅನುವಾದ ಮಾಡುತ್ತಿರುವ ಕೈಂಕರ್ಯದಲ್ಲಿ ತೊಡಗಿರುವುದು ನಿಜವಾಗಿಯೂ ಅವಿಸ್ಮರಣೀಯ ಕೆಲಸ. ಬಸವ ಸಮಿತಿಯ ಅಧ್ಯಕ್ಷನಾಗಿ, ಒಬ್ಬ ಇಂಜಿನೀಯರ್ ಆಗಿ, ಬಸವಣ್ಣನವರ ಬಗ್ಗೆ ತಿಳಿದುಕೊಳ್ಳುತ್ತಾ ಬಸವಣ್ಣನವರನ್ನು ಜಗತ್ತಿಗೆ ಪರಿಚಯಿಸುವ ಕಾಯಕದಲ್ಲಿ ತೊಡಗಿದೆ. ಅವರ ವಿಚಾರಗಳನ್ನು ಯುವ ಪೀಳಿಗೆಗೆ ಮನದಟ್ಟು ಮಾಡಿಕೊಡುವ ಕಾರ್ಯಕ್ರಮಗಳನ್ನು ಸಾಮಾಜಿಕ ತಾಣಗಳ ಮುಖೇನ ಮಾಡುತ್ತಿದ್ದೇವೆ. ಹಾಗೆಯೇ ವಿದೇಶಗಳಲ್ಲಿಯೂ ವಚನಗಳ ಪ್ರಾಮುಖ್ಯತೆಯನ್ನು ಹರಡುವ ಪ್ರಯತ್ನ ನಡೆಯುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಭಾರತದ ಎಲ್ಲಾ ಭಾಷೆಗಳಿಗೂ ವಚನಗಳನ್ನು ತಲುಪಿಸುವ ಹಂತದಲ್ಲಿದ್ದೇವೆ ಎಂದು ಹೇಳುತ್ತಾ ರಾಜಸ್ಥಾನೀ ವಿದ್ವಾಂಸರಾದ ಶ್ರೀ ದೇವಲ್ ಎಂಬುವವರು ವಚನಗಳ ಬಗ್ಗೆ ಅಭ್ಯಸಿಸಿದ ಮೇಲೆ "ಯಾವ ಸಾಹಿತ್ಯದಲ್ಲೂ ನಾನು ವಚನಗಳಷ್ಟು ಶ್ರೇಷ್ಠ ಸಾಹಿತ್ಯವನ್ನು ನೋಡೇ ಇಲ್ಲ, ಆ ಕಾರಣಕ್ಕಾಗಿಯೇ ಇಂದು ಒಟ್ಟು ಭಾರತೀಯ ಸಾಹಿತ್ಯವನ್ನು ಬೇರೆಯದೇ ಆದ ದೃಷ್ಟಿಕೋನದಲ್ಲಿ ನೋಡಬೇಕಾದ ಅಗತ್ಯತೆಯ ಬಗ್ಗೆ ಅವರು ಹೇಳಿದ್ದನ್ನು ಸ್ಮರಿಸಿದರು. ಹಾಗೆಯೇ ಡಾ. ಎಂ.ಎಂ. ಕಲಬುರ್ಗಿಯವರು ವಚನ ಸಾಹಿತ್ಯದ ಮೇಲೆ ಮಾಡಿರುವ ಅಧ್ಯಯನ ಹಾಗೂ ಅವರು ಅದಕ್ಕೆ ಕೊಟ್ಟಿರುವ ಕೊಡುಗೆ ಅಪಾರ ಎಂಬ ವಿಚಾರವನ್ನು ಎಲ್ಲರಿಗೂ ತಿಳಿಸಿದರು ಮತ್ತು ಬಸವಣ್ಣನವರ ಹೆಸರಿನಲ್ಲಿ ಅವರ ಭಾವಚಿತ್ರವಿರುವ ನಾಣ್ಯವನ್ನು ಮುದ್ರಿಸಬೇಕೆಂಬ ವಿಚಾರಕ್ಕೆ ಹೆಚ್ಚು ಒತ್ತು ನೀಡಿದರು. ಈ ಎಲ್ಲಾ ಕಾರಣಗಳಿಂದಾಗಿ ನಾವು ಬಸವಣ್ಣ ಕನ್ನಡಿಗ ಎಂದು ಹೇಳಿಕೊಳ್ಳುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ ಎಂದು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡುತ್ತಾ ಇಂದು ಈ ಇಬ್ಬರು ಮಹನೀಯರು ದೆಹಲಿ ಕರ್ನಾಟಕ ಸಂಘಕ್ಕೆ ಆಗಮಿಸಿರುವುದು ದೆಹಲಿ ಕರ್ನಾಟಕ ಸಂಘದ ಭಾಗ್ಯ. ಕರ್ಮಯೋಗಿ ಬಸವಣ್ಣನವರ ಕುರಿತು ದೆಹಲಿಯಲ್ಲಿ ಒಂದು ದೊಡ್ಡ ಮಟ್ಟದ ಕಾರ್ಯಕ್ರಮವನ್ನು ಆಯೋಜನೆ ಮಾಡಬೇಕು. ಹಾಗೆ ಮಾಡುವ ಮೂಲಕ ಕರ್ನಾಟಕವನ್ನು ಅತ್ಯಂತ ಸುಲಭವಾಗಿ ಹೊರ ಜಗತ್ತಿಗೆ

ಪರಿಚಯಿಸುವ ಕಾರ್ಯವನ್ನು ಬಸವಣ್ಣನವರ ವಚನಗಳ ಮುಖೇನ ಮಾಡಬಹುದು. ಅವರ ಜೊತೆ ದೆಹಲಿ ಕರ್ನಾಟಕ ಸಂಘ ಎಂದೂ ಇರುತ್ತದೆ ಎಂಬ ಆಶಯದ ನುಡಿಗಳನ್ನಾಡಿದರು.


ಆರಂಭದಲ್ಲಿ ಡಾ. ಪುರುಷೋತ್ತಮ ಬಿಳಿಮಲೆಯವರು ಸ್ವಾಗತ ಭಾಷಣ ಮಾಡುತ್ತಾ ಡಾ. ಎಂ.ಎಂ. ಕಲಬುರ್ಗಿಯವರ ಪರಿಚಯ ಮಾಡುತ್ತಾ ಕರ್ನಾಟಕ ಕಂಡ ಹಿರಿಯ ತಲೆಮಾರಿನ ಅತ್ಯುತ್ತಮ ಅಧ್ಯಾಪಕರಲ್ಲೊಬ್ಬರು ಮತ್ತು ಅವರ ವಿದ್ಯಾರ್ಥಿಗಳೆಂದು ಹೇಳಿಕೊಳ್ಳುವುದಕ್ಕೆ ಇಡೀ ಕರ್ನಾಟಕ ಹೆಮ್ಮೆಪಡುತ್ತದೆ. ಹಾಗೆಯೇ ಅವರ "ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ" ಎಂಬ ವಿಷಯದ ಮೇಲೆ ಅವರು ಮಾಡಿರುವ ಕೆಲಸ ಕವಿರಾಜ ಮಾರ್ಗಕ್ಕೂ ಪೂರ್ವದಲ್ಲೂ ಸಾಹಿತ್ಯ ರಚಿಸದ ಕವಿಗಳು ಇದ್ದರೆಂದು ತಿಳಿಸಿಕೊಡುವ ಅವರ ಅಧ್ಯಯನವೇ ಆದಿ ಮತ್ತು ಅಂತ್ಯ. ಅವರು ವಚನ, ಮಾರ್ಗ ಸಂಪುಟಗಳು, ಚರಿತ್ರೆ, ಸಂಸ್ಕೃತಿ, ಜನಪದ ಮುಂತಾಗಿ ವಿವಿಧ ಆಯಾಮಗಳಲ್ಲಿ ಕೆಲಸ ಮಾಡಿದ್ದಾರೆ. ಅವರು ಕರ್ನಾಟಕ ಸಂಶೋಧನೆಗೆ ಉತ್ತಮ ಮಾರ್ಗದರ್ಶನ ಹಾಕಿಕೊಟ್ಟ ಅತ್ಯುತ್ತಮ ಸಂಶೋಧಕರು. ಹಾಗೆಯೇ ಗ್ರಂಥ ಸಂಪಾದನಾ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರ. ಕನ್ನಡ ಇರುವಷ್ಟು ಕಾಲ ಈ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶ್ರೀ ಕಲಬುರ್ಗಿಯವರ ಹೆಸರು ಅಜರಾಮರವಾಗಿರುತ್ತದೆ, ಹಾಗೆಯೇ ಅವರೊಬ್ಬ ಉತ್ತಮ ಆಡಳಿತಗಾರರು. ಜಡವಾಗಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚೈತನ್ಯ ತಂದುಕೊಟ್ಟ ಉತ್ತಮ ಆಡಳಿತಗಾರ ಹಾಗೆಯೇ ಅವರನ್ನು ಹಲವು ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ. "ಜನಪದ ಮತ್ತು ಯಕ್ಷಗಾನ ಅಕಾಡೆಮಿಯ ಜಾನಪದ ಪ್ರಶಸ್ತಿ" ಆರು ಪುಸ್ತಕಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ವಿಶ್ವಮಾನ ಪ್ರಶಸ್ತಿ, 2006ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಅವರಿಗೆ ಲಭಿಸಿರುವುದು ಅಭಿನಂದನಾರ್ಹ ಎಂದು ಹೇಳುತ್ತಾ ಸಾಹಿತ್ಯಾಸಕ್ತರಿಗೆ ಪರಿಚಯಿಸಿದರು.

ಸಾಹಿತ್ಯ ಸಂಜೆ ಕಾರ್ಯಕ್ರಮದ ಕೊನೆಯಲ್ಲಿ ಸಾಹಿತ್ಯಾಸಕ್ತರು, ಭಾಷಾಭಿಮಾನಿಗಳು ಪರಸ್ಪರ ಸಂವಾದ ಮಾಡುವುದರ ಮುಖಾಂತರ, ಶ್ರೀ ನರಸಿಂಹ ಮೂರ್ತಿ, ಶ್ರೀ ಚಿದಂಬರ ಕೋಟೆ, ಡಾ. ಅಹಲ್ಯಾಚಿಂತಾಮಣಿ, ಶ್ರೀ ಶಿವಾನಂದ ಇಂಗಳೇಶ್ವರ, ಶ್ರೀ ಎಸ್.ಎಸ್. ಜವಳಿ, ಶ್ರೀ ಕಲ್ಲಪ್ಪ ಭಜಂತ್ರಿ ಮುಂತಾದವರು ಕನ್ನಡ ಭಾಷೆಯು ಇತ್ತೀಚಿನ ದಿನಗಳಲ್ಲಿ ಇಂಗ್ಲೀಷಿನ ಪ್ರಭಾವದಿಂದ ಬಹಳ ಬೇಗನೆ ಅಳಿವಿನ ದಾರಿ ಹಿಡಿಯುತ್ತಿರುವ ಬಗ್ಗೆ ತಮ್ಮ ಆಘಾತವನ್ನು ವ್ಯಕ್ತಪಡಿಸಿದರು. ಹಾಗೆಯೇ ಡಾ. ಅಹಲ್ಯಾಚಿಂತಾಮಣಿಯವರು ಹೊಸ ಪೀಳಿಗೆಯ ಯುವಕರು ಸಂಶೋಧನೆಯ ವಿಚಾರದಲ್ಲಿ ನೀರಸ ಪ್ರವೃತ್ತವಾಗಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲಾ ಸಾಹಿತ್ಯೋಪಾಸಕರಿಗೆ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು. ಕಾರ್ಯಕ್ರಮವನ್ನು ಸಾಹಿತ್ಯ ಸಮಿತಿಯ ಸಂಚಾಲಕರಾದ ಪಿ.ಸಿ. ಶ್ರೀನಿವಾಸರವರು ನಿರೂಪಿಸಿದರು. ಅ

*ಶ್ರೀನಿವಾಸ್ ಪಿ.ಸಿ.*

# ಸಂಘದಲ್ಲಿ ಮುದ್ದಣ ಸಂಸ್ಮರಣೆ, ತಾಳಮದ್ದಳೆ ಮತ್ತು ಅಭಿನಂದನೆ




ಭಾರತದಲ್ಲಿ ಬ್ರಿಟಿಷರ ಆಗಮನ, ಆಧುನಿಕ ಶಿಕ್ಷಣ ಮೊದಲಾದ ಸಮಾಜಿಕ ಬದಲಾವಣೆ ಹಾಗೂ ಬಡತನ ಮತ್ತು ಅನಾರೋಗ್ಯದ ವೈಯಕ್ತಿಕ ಸಮಸ್ಯೆಗಳ ನಡುವೆಯೂ ಕವಿ ಮುದ್ದಣ ಶ್ರೇಷ್ಠ ಕಾವ್ಯಕೃತಿಗಳನ್ನು ಕನ್ನಡಕ್ಕೆ ನೀಡಿದ ಎಂಬುದಾಗಿ ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು.

ಅವರು ಇದೇ ಜುಲೈ 19ರಂದು ದೆಹಲಿ ಕರ್ನಾಟಕ ಸಂಘ ಹಮ್ಮಿಕೊಂಡ ಮುದ್ದಣ ಸಂಸ್ಮರಣೆ, 'ದೂರ್ವಾಸ–ಅಜಮುಖಿ' ತಾಳಮದ್ದಳೆ ಹಾಗೂ ಹಿರಿಯ ಯಕ್ಷಗಾನ ಕಲಾವಿದರಿಗೆ ಅಭಿನಂದನೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾತನಾಡಿದರು.

ಕೇವಲ 31 ವರ್ಷ ಬದುಕಿದ್ದ ನಂದಳಿಕೆ ಲಕ್ಷ್ಮೀನಾರಾಯಣಪ್ಪ 'ಮುದ್ದಣ' ಕಾವ್ಯನಾಮದಿಂದ ಯಕ್ಷಗಾನ ಪ್ರಸಂಗಗಳೂ ಸೇರಿದಂತೆ ಮಹಾಕಾವ್ಯಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅನನ್ಯ ಎಂದು ತಮ್ಮ ಉಪನ್ಯಾಸದಲ್ಲಿ ಅವರು ವಿವರಿಸಿದರು.

ಇದೇ ಸಂದರ್ಭದಲ್ಲಿ ಹಿರಿಯ ಯಕ್ಷಗಾನ ಭಾಗವತ ಶ್ರೀ ಬಲಿಪ ನಾರಾಯಣ ಭಾಗವತರು, ಶ್ರೀ ಪಟ್ಲ ಸತೀಶ್ ಶೆಟ್ಟಿ, ಕಲಾವಿದರಾದ ಶ್ರೀ ಸೂರಿಕುಮೇರಿ ಗೋವಿಂದ ಭಟ್, ನಿಡ್ಲೆ ಗೋವಿಂದ ಭಟ್ ಮತ್ತು ಶ್ರೀ ಉಬರಡ್ಕ ಉಮೇಶ ಶೆಟ್ಟಿ ಅವರನ್ನು ಅಭಿನಂದಿಸಲಾಯಿತು.

ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನದ ನಿರ್ದೇಶಕರಾದ ಶ್ರೀ ಸರವು ಕೃಷ್ಣ ಭಟ್ ಮತ್ತು ಶ್ರೀಮತಿ ವಿದ್ಯಾ ಕೋಳ್ಯೂರು ಹಾಗೂ ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ ಸನ್ಮಾನಿತರ ಕುರಿತು ಮಾತನಾಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮಾತನಾಡಿ ಇಲ್ಲಿ ಮೂರು ವಿಶೇಷ ಕಾರ್ಯಕ್ರಮಗಳು ಜರಗಿದ್ದು ಸ್ಮರಣೀಯ ಎಂದು ಸಂತಸ ವ್ಯಕ್ತಪಡಿಸಿದರು. ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತ ಶ್ರೀ ಶ್ರೀಕಾಂತ್ ರಾವ್ ಅವರು ಮಾತನಾಡಿ, ತಾಳಮದ್ದಳೆ ನನಗೆ ಬಹಳ ಇಷ್ಟವಾದ ಕಲೆ ಎಂದರು.

ನಂತರ ನಡೆದ 'ದೂರ್ವಾಸ ಅಜಮುಖಿ' ಯಕ್ಷಗಾನ ತಾಳಮದ್ದಳೆ ಕೇಳುಗರ ಮುಕ್ತ ಪ್ರಶಂಸೆ ಪಡೆಯಿತು. ದೂರ್ವಾಸನಾಗಿ ಶ್ರೀ ಗಣೇಶ ಕನ್ನಡಿಕಟ್ಟೆ ಹಾಗೂ ಮಾಯಾ ಅಜಮುಖಿಯಾಗಿ ಶ್ರೀ ಸೂರಿಕುಮೇರಿ ಗೋವಿಂದ ಭಟ್ಟರ ಅರ್ಥಗಾರಿಕೆ, ಬಲಿಪ ನಾರಾಯಣ ಭಾಗವತರ ಭಾಗವತಿಕೆ, ಶ್ರೀ ದೇವಾನಂದ ಭಟ್ಟರ ಚೆಂಡೆ ಪ್ರಮುಖ ಆಕರ್ಷಣೆಯಾಗಿತ್ತು. ಘೋರ ಅಜಮುಖಿಯಾಗಿ ಶ್ರೀ ಹರಿನಾರಾಯಣ ಭಟ್, ಎಡನೀರು ಹಾಗೂ ಹಿಮ್ಮೇಳದಲ್ಲಿ ಮದ್ದಳೆ ಶ್ರೀ ಪದ್ಮನಾಭ ಉಪಾಧ್ಯ, ಚಕ್ರತಾಳ ಶ್ರೀ ಪೂರ್ಣೇಶ ಆಚಾರ್ಯ ಇವರು ಭಾಗಹಿಸಿದ್ದರು.

ಅಕಾಡೆಮಿ ಆಫ್ ತೆಂಕು ತಿಟ್ಟು ಯಕ್ಷಗಾನ ಹಾಗೂ ಸೌತ್ ಕೆನರಾ ಕ್ಲಬ್, ದೆಹಲಿ ಇದರ ಸಹಕಾರದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಂಘದ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದನಾರ್ಪಣೆ ಮಾಡಿದರು. ಅ


*ಡಾ. ವೈ. ಅವನೀಂದ್ರನಾಥ್ ರಾವ್*





# ಕಸೂತಿ ಮತ್ತು ಕವಡೆಗಳಾಟ







ಕಸೂತಿ ಕಲೆಯ ಇತಿಹಾಸ ಅತ್ಯಂತ ಕುತೂಹಲಕರವಾದ ಸಂಗತಿಗಳನ್ನು ಬೆಳಕಿಗೆ ತರುತ್ತದೆ. ಕ್ರಿಸ್ತ ಪೂರ್ವ 10ನೇ ಶತಮಾನದ ಹೊತ್ತಿಗೆ ಗಿಡಗಳ ಕಾಂಡವನ್ನು ಜಜ್ಜಿ ಅಗಲಗೊಳಿಸಿ, ಅದಕ್ಕೆ ಹುಲ್ಲನ್ನು ಸೇರಿಸಿ ಹೊಲಿದು ಒಂದು ಬಗೆಯ ಚಿತ್ತಾರವನ್ನು ಸಜ್ಜುಗೊಳಿಸಲಾಗುತ್ತಿತ್ತು. ನಿಧಾನಕ್ಕೆ ಅದಕ್ಕೆ ಪ್ರಾಣಿಗಳ ಚರ್ಮವನ್ನು ಹೊದಿಸಿ, ರೋಮಗಳನ್ನು ಸಿಕ್ಕಿಸಿ ಕಲಾತ್ಮಕಗೊಳಿಸಲಾಯಿತು. ಬಟ್ಟೆಯ ಅನ್ವೇಷಣೆಯೊಂದಿಗೆ ಕಸೂತಿ ಕಲೆಗಾರಿಕೆ ಇನ್ನಷ್ಟು ಎತ್ತರಕ್ಕೇರಿತು. ಕ್ರಿಸ್ತ ಶಕ ಪೂರ್ವ 5ನೇ ಶತಮಾನದ ಹೊತ್ತಿಗೆ  ಚೀನಾ ಮತ್ತು ಈಜಿಪ್ಟ್‌ಗಳಲ್ಲಿ ಕಸೂತಿ ಕಲೆಗೆ ಇನ್ನಿಲ್ಲದ ಬೇಡಿಕೆಯಿತ್ತು. ಇಂದಿಗೂ ಚೀನಾ ಮತ್ತು ಜಪಾನುಗಳಲ್ಲಿನ ಕಲೆ ಮತ್ತು ಸಂಸ್ಕೃತಿಗಳು ಅಲ್ಲಿನ ಕಸೂತಿ ಕಲೆಗಾರಿಕೆಯೊಂದಿಗೆ ಗಾಢ ಸಂಬಂಧ ಸಾಧಿಸಿಕೊಂಡಿವೆ. ಅಲ್ಲಿನ ಸಾಂಪ್ರದಾಯಕ ಆಚರಣೆಗಳಲ್ಲಿಯೂ ಅವಕ್ಕೆ ಸ್ಥಾನ ಲಭಿಸಿದೆ. ಭಾರತದಲ್ಲಿ ಕಸೂತಿಯು ಹೆಚ್ಚಾಗಿ ಚೆಲುವಿನೊಂದಿಗೆ ಸೇರಿಕೊಂಡು ಜನಪ್ರಿಯವಾಗಿದೆ.

ಈಚೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ತನ್ನ ಕಸೂತಿ ಚಿತ್ರಗಳನ್ನು ಪ್ರದರ್ಶಿಸಿದ ಗುಲಬರ್ಗಾದ ಕುಮಾರಿ ಮೀನಾಕ್ಷಿ (1983) ಅವರು ಕಸೂತಿ ಕಲೆಯಲ್ಲಿನ ತನ್ನ ಹೊಸ ಬಗೆಯ ಅಭಿವ್ಯಕ್ತಿ ಕ್ರಮದ ವಿನ್ಯಾಸಗಳನ್ನು ನೋಡುಗರಿಗೆ ಪರಿಚಯಿಸುವಲ್ಲಿ ಯಶಸ್ವಿಯಾದರು. 2007ರಲ್ಲಿ ಭಾರತ ಸರಕಾರದ ಸಂಸ್ಕೃತಿ ಸಚಿವಾಲಯದಿಂದ ಶಿಷ್ಯವೇತನ ಪಡೆದು ಈ ಕಲೆಯಲ್ಲಿ ಪರಿಣತಿಯನ್ನು ಸಾಧಿಸಿದ್ದ ಅವರು, ಈಗಾಗಲೇ ಸುಮಾರು ಹತ್ತಕ್ಕೂ ಹೆಚ್ಚು ಕಡೆ ಸಾಮೂಹಿಕ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಮಧ್ಯಪ್ರದೇಶ, ಉತ್ತರಾಂಚಲ ಮೊದಲಾದ ಕಡೆಗಳಲ್ಲಿ ನಡೆದ ಕ್ಯಾಂಪ್‌ಗಳಲ್ಲಿ ಭಾಗವಹಿಸಿ ತನ್ನ ಕಲೆಗೆ ಒಂದು ಬಗೆಯ ನಿಖರತೆಯನ್ನು ತಂದುಕೊಂಡಿದ್ದಾರೆ. ದೆಹಲಿಯ ಪ್ರದರ್ಶನವು ಅವರ ಕಲೆಗಾರಿಕೆ ತಲುಪಿದ ಎತ್ತರಕ್ಕೆ ಒಂದು ಸಂಕೇತವಾಗಿದೆ.

ಇಲ್ಲಿ ಪ್ರದರ್ಶಿತವಾದ ಕಲಾಕೃತಿಗಳಲ್ಲಿ ಮೀನಾಕ್ಷಿ ಅವರು ವಿವಿಧ ಬಣ್ಣಗಳ ಬಟ್ಟೆ, ನೂಲು, ಗುಬ್ಬಿಗಳು (ಬಟನ್), ಕನ್ನಡಿ ಚೂರುಗಳನ್ನು ಹೇರಳವಾಗಿ ಬಳಸಿದ್ದಾರೆ. ಜೊತೆಗೆ ವೃತ್ತ, ಆಯತ, ಚೌಕ ಮತ್ತಿತರ ಆಕಾರಗಳನ್ನು ಬಳಸಿ ವಿಭಿನ್ನ ಪರಿಣಾಮ ಬೀರಲು ಪ್ರಯತ್ನಿಸಿದ್ದಾರೆ, ಮತ್ತು ಅದರಲ್ಲಿ ಸಾಕಷ್ಟು ಯಶಸ್ಸನ್ನು ಸಾಧಿಸಿದ್ದಾರೆ. ಉದಾಹರಣೆಗೆ ಅವರು ಆಮೆಯನ್ನು ಪ್ರಸ್ತುತ ಪಡಿಸಿದ ರೀತಿಯನ್ನೇ ಗಮನಿಸಬೇಕು. ಕಸೂತಿಯು ಕೇವಲ ಶೃಂಗಾರಕ್ಕಾಗಿ ಮಾತ್ರ ಇರುವುದಲ್ಲ, ಬದಲು ಅದು ಒಂದು ಪ್ರಬಲ ಸಂಕೇತವಾಗಿಯೂ ಪರಿಣಾಮ ಬೀರಬಲ್ಲುದು ಎಂಬುದನ್ನು ಅವರು ಚೆನ್ನಾಗಿ ಸಾಬೀತು ಪಡಿಸಿದ್ದಾರೆ. ಕನ್ನಡಿಗಳ ಜಾಗದಲ್ಲಿ ಅಥವಾ ಕನ್ನಡಿಗಳ ಜೊತೆಗೆ ಕವಡೆಗಳನ್ನು ಮೀನಾಕ್ಷಿ ಅವರು ಬಳಸಿಕೊಂಡ ರೀತಿಯೂ ಮೋಹಕವಾದುದು. ಭಾರತದಲ್ಲಿ ಕವಡೆಗಳಿಗೆ ಮಾಂತ್ರಿಕ ಶಕ್ತಿಯೂ ಸೇರಿದಂತೆ ಹಲವು ಆಯಾಮಗಳಿವೆ. ಹೀಗಾಗಿ ಕವಡೆಗಳ ಬಳಕೆಯು ಮೀನಾಕ್ಷಿ ಅವರ ಕಲೆಗಾರಿಕೆಗೆ ಗಹನವಾದ ಅರ್ಥಗಳನ್ನು ತಂದು ಕೊಡುವಲ್ಲಿ ಗೆದ್ದಿವೆ.

ದೆಹಲಿಯಲ್ಲಿ ನಮಗೆಲ್ಲ ಹೊಸ ಬಗೆಯ ಅನುಭವ ನೀಡಿದ ಮೀನಾಕ್ಷಿ ಅವರಿಗೆ ಅಭಿನಂದನೆಗಳು. ಅವರು ಹಿಡಿದ ಹಾದಿ ಹೊಸದು, ಅದರಲ್ಲಿ ಅವರಿಗೆ ಯಶಸ್ಸು ಸಿಗಲಿ. ಅ

***ಡಾ. ಪುರುಷೋತ್ತಮ ಬಿಳಿಮಲೆ***



# ಕನ್ನಡ ಮತ್ತು ಸಂಸ್ಕೃತಿಯ ಉಳಿವಿಗೆ ಯಕ್ಷಗಾನದ ಕೊಡುಗೆ-ವಿಚಾರ ಸಂಕಿರಣ

ಮಂಗಳೂರು ವಿಶ್ವವಿದ್ಯಾಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನ ಮತ್ತು ಸೌತ್ ಕೆನರಾ ಕ್ಲಬ್ ಆಯೋಜನೆಯೊಂದಿಗೆ ದೆಹಲಿ ಕರ್ನಾಟಕ ಸಂಘದಲ್ಲಿ 'ಕನ್ನಡ ಮತ್ತು ಸಂಸ್ಕೃತಿಯ ಉಳಿವಿಗೆ ಯಕ್ಷಗಾನದ ಕೊಡುಗೆ' ಎಂಬ ವಿಷಯದಲ್ಲಿ ಒಂದು ವಿಚಾರ ಸಂಕಿರಣವು ಜುಲೈ 11ರಂದು ನಡೆಯಿತು. ಸುಪ್ರಸಿದ್ಧ ಯಕ್ಷಗಾನ ಕಲಾವಿದರಾದ ಸೂರಿಕುಮೇರಿ ಕೆ. ಗೋವಿಂದ ಭಟ್ ಅವರು ಅಧ್ಯಕ್ಷತೆ ವಹಿಸಿದ್ದರು.

ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರೊಫೆಸರ್ ಡಾ. ವೆಂಕಟಾಚಲ ಹೆಗಡೆ, ಅಮೇರಿಕನ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನ ನಿರ್ದೇಶಕರಾದ ಡಾ. ಪುರುಷೋತ್ತಮ ಬಿಳಿಮಲೆ, ಕೇಂದ್ರ ಸಂಸ್ಕೃತಿ ಇಲಾಖೆಯಲ್ಲಿ ಗ್ರಂಥಾಲಯ ಮತ್ತು ಮಾಹಿತಿ ಅಧಿಕಾರಿಯಾಗಿರುವ ಡಾ. ವೈ. ಅವನೀಂದ್ರನಾಥ್ ರಾವ್ ಮತ್ತು ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನದ ನಿರ್ದೇಶಕರಾದ ಶ್ರೀಮತಿ ವಿದ್ಯಾ ಕೋಳ್ಯೂರು ವಿವಿಧ ವಿಷಯಗಳಲ್ಲಿ ಪ್ರಬಂಧಗಳನ್ನು ಮಂಡಿಸಿದರು.

ಮೊದಲು ವಿಚಾರ ಮಂಡಿಸಿದ, ಡಾ. ಅವನೀಂದ್ರನಾಥ್ ರಾವ್ ಅವರು ಯಕ್ಷಗಾನದ ಕೊಡುಗೆಯನ್ನು ಐದು ಕ್ಷೇತ್ರಗಳಲ್ಲಿ ಗುರುತಿಸಲು ಪ್ರಯತ್ನಿಸಿದರು. ಧಾರ್ಮಿಕ, ಭಾಷೆ, ಸಂವಾದ, ಶೈಕ್ಷಣಿಕ, ನೈತಿಕ ಹಾಗೂ ಮೌಲಿಕವಾಗಿ ಯಕ್ಷಗಾನ ನೀಡಿರುವ ಕೊಡುಗೆಯನ್ನು ಅತ್ಯಂತ ಕ್ರಮಬದ್ಧವಾಗಿ ವಿವರಿಸಿದರು.

ಡಾ. ವೆಂಕಟಾಚಲ ಹೆಗಡೆಯವರು ಹಳ್ಳಿ ಹಳ್ಳಿಗಳಲ್ಲಿ ಯಕ್ಷಗಾನ ಹೇಗೆ ಸಂಸ್ಕೃತಿಯ ಪ್ರಸಾರ–ಪ್ರಚಾರ ಮತ್ತು ಪ್ರಗತಿಗಾಗಿ ಕೊಡುಗೆ ನೀಡುತ್ತಾ ಬಂದಿವೆ ಎಂದು ಉದಾಹರಣೆಗಳ ಮೂಲಕ ವಿವರಿಸಿದರು. 'ಸ್ಥಳೀಯ'ವಾದ ಈ ಕಲೆ ಹೇಗೆ 'ಜಾಗತಿಕ'ವಾಗಿ ವಿಶ್ವಸಂಸ್ಕೃತಿಗೆ ತನ್ನ ಕೊಡುಗೆ ನೀಡುತ್ತಾ ಬಂದಿದೆ ಎಂದು ಮಾರ್ಮಿಕವಾಗಿ ಮತ್ತು ಕಲಾವಿದರ ವಿಶಿಷ್ಟ ಶೈಲಿಗಳನ್ನು ಹೇಗೆ ಉಳಿಸಿಕೊಂಡು ಬರಬೇಕಾಗಿದೆ ಅದರಲ್ಲಿ ಅಂತರರಾಷ್ಟ್ರೀಯ ಕಾನೂನಿನ ಪಾತ್ರವೇನು ಮತ್ತು ಅದನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ತಿಳಿಸಿಕೊಟ್ಟರು.

ಶ್ರೀಮತಿ ವಿದ್ಯಾಕೋಳ್ಯೂರುರವರು ಮಾತನಾಡಿ ಇಂದಿನ ಈ ವ್ಯಾಪಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಯುಗದಲ್ಲಿ ಯಕ್ಷಗಾನ ಕಲಾವಿದರು ತಮ್ಮನ್ನು ಹೇಗೆ ಸಂಘಟಿಸಿಕೊಳ್ಳಬೇಕು ಮತ್ತು ಯಕ್ಷಗಾನವನ್ನು "ಜಾನಪದ"ದಿಂದ "ಶಾಸ್ತ್ರೀಯ" ಸ್ಥಾನಮಾನಕ್ಕೆ ತರಲು ಒಗ್ಗಟ್ಟಿನಿಂದ ಹೋರಾಡಬೇಕೆಂದು ಕರೆಕೊಟ್ಟರು.

ಡಾ. ಪುರುಷೋತ್ತಮ ಬಿಳಿಮಲೆಯವರು ತಮ್ಮ ವಿಚಾರ ಮಂಡಿಸುತ್ತಾ ಕೇಳುವ ಗಮಕಕಲೆಯಿಂದ ಹರಿಕಥಾ ಪ್ರಸಂಗದಿಂದ ಯಕ್ಷಗಾನ ಬಂದು ನೋಡುವ ಜನಕಲೆಯಾಗಿ ಹೇಗೆ ಬೆಳೆದು ಬಂತು ಎಂದು ವಿವರಿಸಿದರು. ದೇವಾಲಯ ಹಾಗೂ ಒಂದ ಸಣ್ಣ ವರ್ಗಕ್ಕೆ ಸೀಮಿತವಾಗಿದ್ದ ಪೂರಾಣಕಥೆಗಳು ಯಕ್ಷಗಾನದ ಮೂಲಕ ಊರು ಊರುಗಳಲ್ಲಿ ಸಾರ್ವಜನಿಕ ಪ್ರದರ್ಶನಗಳ ಮೂಲಕ ಎಲ್ಲರ ಸ್ವತ್ತಾಯಿತು ಮತ್ತು ಯಕ್ಷಗಾನವು ಇದನ್ನು ಅತ್ಯಂತ ಸರಳ ಹಾಗೂ ಸುಂದರವಾಗಿ ಜನ ಸಾಮಾನ್ಯರಿಗೆ ಹೇಗೆ ತಲುಪಿಸುತ್ತಾ ಬಂದಿದೆ ಎಂಬುದನ್ನು ನಿದರ್ಶನಗಳೊಂದಿಗೆ ವಿವರಿಸಿದರು.

ಅಧ್ಯಕ್ಷ ಭಾಷಣ ಮಾಡುತ್ತಾ ಶ್ರೀ ಸೂರಿಕುಮೇರಿ ಕೆ. ಗೋವಿಂದೆ ಭಟ್ಟರು ಅದುವರೆಗೆ ಮಂಡಿಸಲಾಗಿದ್ದ ಎಲ್ಲ ವಾದ, ವಿಚಾರ ಹಾಗೂ ಅನಿಸಿಕೆಗಳನ್ನು ಕ್ರೋಢೀಕರಿಸಿ ಎಲ್ಲೆಲ್ಲಿ ಏನಾಗಬೇಕಾಗಿದೆ ಹಾಗೂ ಅದನ್ನು ನಾವು ಹೇಗೆ ಮಡಬೇಕೆಂಬುದರ ಬಗ್ಗೆ ತಮ್ಮ ಅನುಭವದಾಳದಿಂದ ಬಂದ ಅಮೃತಧಾರೆಯನ್ನೇ ನೀಡಿದರು. ಯಕ್ಷಗಾನದ ಕಲಾವಿದರು ಹೆಚ್ಚು ಹೆಚ್ಚು ವಿಚಾರಗಳನ್ನು ತಿಳಿದುಕೊಂಡು ಕಲೆ ಮತ್ತು ಕಲಾವಿದರ ಅಭಿವೃದ್ಧಿಗಾಗಿ ಶ್ರಮಿಸಿದಾಗಲೇ ಯಕ್ಷಗಾನ ಕನ್ನಡ ಮತ್ತು ಸಂಸ್ಕೃತಿಗೆ ಇನ್ನಷ್ಟು ಹೆಚ್ಚಿನ ಕೊಡುಗೆ ಕೊಡಲು ಸಾಧ್ಯ ಎಂದು ನುಡಿದರು. ಸರಕಾರದ ವತಿಯಿಂದ ಹಾಗೂ ಇನ್ನೂ ಬೇರೆ ಬೇರೆ ಮೂಲಗಳಿಂದ ಯಕ್ಷಗಾನಕ್ಕೆ ಹಾಗೂ ಅದರ ಕಲಾವಿದರಿಗೆ ಏನೆಲ್ಲಾ ಸೌಲಭ್ಯಗಳಿವೆ ಎಂಬುದು ಇನ್ನು ಎಷ್ಟೋ ಮಂದಿ ಕಲಾವಿದರಿಗೆ ತಿಳಿಯದಾಗಿದೆ. ಹಾಗಾಗಿ ಮಾತ್ರ ಮೊದಲು ಎಲ್ಲಾ ಕಲಾವಿದರಿಗೆ ಈ ರೀತಿಯ ವಿಶೇಷ ಜ್ಞಾನದ ಅಗತ್ಯವಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅತ್ಯಂತ ವಿಶೇಷ ಬಿಂದುವಾಗಿದ್ದ ಹಿರಿಯ ಭಾಗವತರಾದ ಶ್ರೀ ಬಲಿಪ ನಾರಾಯಣ ಭಾಗವತರು ವಿಚಾರ ಸಂಕಿರಣದುದ್ದಕ್ಕೂ ತಮ್ಮ ಅನುಭವದ ಕಿಡಿಗಳನ್ನು ಹೀರುತ್ತಾ ವಿಶೇಷವಾದ ಸಲಹೆ ಸಮಾಧಾನಗಳನ್ನು ಸೂಚಿಸಿದರು. ಯಕ್ಷಗಾನ ಕಲೆ ಮತ್ತು ಕಲಾವಿದರ ಜೀವನ ಹಾಗೂ ಅಭಿವೃದ್ಧಿಯ ಕುರಿತಾದ ಹತ್ತು ಹಲವು ಮಹತ್ತರ ಮಜಲುಗಳನ್ನು ಬಿಚ್ಚಿಕೊಳ್ಳಲು ಅನುವು ಮಾಡಿಕೊಟ್ಟಿತು.

ಶ್ರೀ ಎಸ್. ಕೃಷ್ಣ ಭಟ್ ಅವರು ಸ್ವಾಗತ ಭಾಷಣ ಮಾಡುತ್ತಾ ಈ ಸಂಕಿರಣದ ಉದ್ದೇಶವನ್ನು ಸಂಕ್ಷೇಪವಾಗಿ ವಿವರಿಸಿದರು. ಕರ್ನಾಟಕ ಕರಾವಳಿಯ ಸುಪ್ರಸಿದ್ಧ ಕಲೆಗಳಲ್ಲೊಂದಾದ ಯಕ್ಷಗಾನವು ಕನ್ನಡ ಭಾಷೆ ಹಾಗೂ ರಾಜ್ಯ, ರಾಷ್ಟ್ರ ಮತ್ತು ವಿಶ್ವಸಂಸ್ಕೃತಿಗೆ ನೀಡುತ್ತಿರುವ ಕೊಡುಗೆಗಳನ್ನು ಚರ್ಚಿಸುವುದರ ಜೊತೆಗೆ ಈ ನಿಟ್ಟಿನಲ್ಲಿ ಎದುರಿಸುತ್ತಿರುವ ಸಮಸ್ಯೆ–ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ಹಾಗೂ ಈ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಅಗತ್ಯವಾದ ಸಲಹೆ ಸಮಧಾನಗಳನ್ನು ಸಹ ವಿದ್ವಾಂಸರು ನೀಡಬೇಕಾಗಿ ಕೇಳಿಕೊಂಡರು.

ಸಭಿಕರನೇಕರು ಈ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಕನ್ನಡ ಸಂಸ್ಕೃತಿಗೆ ಮಾತ್ರವಲ್ಲದೆ ದೇಶದ ಸಂಸ್ಕೃತಿಗೆ ಕೊಡುಗೆ ನೀಡುವಂತಹ ಒಂದು ವಿಶಿಷ್ಟ ಕಲೆಗೆ ಅಪಾರವಾದ ಜನ ಬೆಂಬಲ ಇದ್ದರೂ ಇಂತಹ ಕಲೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವಲ್ಲಿ ಹಾಗೂ ಇದರ ಮೌಲಿಕ ಅಂಶಗಳನ್ನು ಕಾಯ್ದಿಡುವಲ್ಲಿ ತೆಂಕು / ಬಡಗುತಿಟ್ಟಿನ ಯಕ್ಷಗಾನಗಳಿಗಾಗಿ ಪ್ರತ್ಯೇಕ ಅಕಾಡೆಮಿಯ ಸ್ಥಾಪನೆ ಇಂದಿನ ಅಗತ್ಯ ಎಂಬ ನಿರ್ಧಾರಕ್ಕೆ ಬಂದುದಲ್ಲದೆ ಸರ್ಕಾರಕ್ಕೆ ಇದನ್ನು ಮನದಟ್ಟು ಮಾಡುವಲ್ಲಿ ವಿದ್ವಾಂಸರ ಸಹಕಾರ ಅಗತ್ಯವಾಗಿ ಬೇಕು ಎಂಬ ವಿಚಾರವನ್ನು ಸಹ ಈ ವಿಚಾರ ಸಂಕಿರಣದಲ್ಲಿ ಒಮ್ಮತದಿಂದ ಒಪ್ಪಿಕೊಳ್ಳಲಾಯಿತು.

ವಿಚಾರ ಸಂಕಿರಣವನ್ನು ಶ್ರೀ ಸಖಾರಾಮ ಉಪೂರು ಅವರು ಅತ್ಯಂತ ಪ್ರತಿಭಾಪೂರ್ಣವಾಗಿ ನಡೆಸಿಕೊಟ್ಟರು. ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಯಕ್ಷಗಾನ ಹಿರಿಯ ಕಲಾವಿದರು, ದೆಹಲಿಯ ಯಕ್ಷಾಭಿಮಾನಿಗಳು ಚರ್ಚೆಯಲ್ಲಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಅ

***ಸಖಾರಾಮ ಉಪ್ಪೂರು***



# ಗಂಭೀರತೆಯಿಂದ ಕೂಡಿದ ರಕ್ತರಾತ್ರಿ

ನವದೆಹಲಿಯ 'ದಿನಕರ' ತಂಡ ಪ್ರಸ್ತುತಪಡಿಸಿದ ನಾಟಕ 'ರಕ್ತರಾತ್ರಿ' ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ ಜುಲೈ 26ರಂದು ತುಂಬಿ ನೆರೆದಿದ್ದ ದೆಹಲಿ ಕನ್ನಡಿಗರಿಗೆ ಒಂದು ಗಂಭೀರ ನಾಟಕದ ಪರಿಚಯ ಮಾಡಿಸಿತು.

ಕರ್ನಾಟಕದ ಶೇಕ್ಸ್‌ಪೀಯರ್ ಹನುಮಂತರಾವ್ ಭೀಮರಾವ ಕಂದಗಲ್ಲರ ರಕ್ತರಾತ್ರಿ ನಾಟಕದ ಒಂದೆರಡು ಭಾಗಗಳನ್ನು ಆಯ್ದುಕೊಂಡು ನಿರ್ದೇಶಕ ಶಿವಾನಂದ ಇಂಗಳೇಶ್ವರರವರು ಸ್ಥಳೀಯ ಕಲಾವಿದರಿಂದ ಕೃಷ್ಣ, ಭೀಮ, ಅಶ್ವತ್ಥಾಮ, ಅರ್ಜುನ, ಧರ್ಮರಾಯ, ಧುರ್ಯೋಧನ, ದ್ರೌಪದಿ, ಉತ್ತರೆ, ಭಾನುಮತಿಯರಂತಹ ಮಹಾಭಾರತದ ಪ್ರಮುಖ ಪಾತ್ರಗಳನ್ನು ಪ್ರಸ್ತುತ ಪಡಿಸಿದರು. ಕಂದಗಲ್ಲರ ಅಂದಿನ ಹಳೆ, ಮಧ್ಯಮ ಹಾಗೂ ನವ್ಯ ಕನ್ನಡಗಳನ್ನೊಳಗೊಂಡ ಒಂದೊಂದು ಸಂಭಾಷಣೆಯೂ ಅತ್ಯಂತ ಗಂಭೀರ ಹಾಗೂ ಅರ್ಥಗರ್ಭಿತವಾಗಿರುವ ಒಂದು ಕಠಿಣ ನಾಟಕವನ್ನು ದೆಹಲಿಯ ಹವ್ಯಾಸಿ ಕನ್ನಡಿಗ ಕಲಾವಿದರು ಆಡುವುದು ನಿಜಕ್ಕೂ ಒಂದು ಅದ್ಭುತವೇ ಸರಿ.

ಅಶ್ವತ್ಥಾಮನಾಗಿ ಶಶಿಧರ ಮುನುವಳ್ಳಿ, ದ್ರೌಪದಿಯಾಗಿ ಆಶಾಲತಾ ಮಹದೇವ, ಉತ್ತರೆಯಾಗಿ ಶಿಲ್ಪ ಹರಿಪ್ರಿಯಾ, ಭಾನುಮತಿಯಾಗಿ ಸವಿತಾ ನೆಲ್ಲಿ ತಮ್ಮ ತಮ್ಮ ಪಾತ್ರಗಳಿಗೆ ಜೀವ ತುಂಬುವಲ್ಲಿ ಹೆಚ್ಚಿನ ಶ್ರಮ ವಹಿಸಿದಂತೆ ಕಂಡು ಬಂದಿತು. ಭೀಮ, ಧರ್ಮರಾಯ, ಅರ್ಜುನ ಹಾಗೂ ಧುರ್ಯೋಧನರಾಗಿ ಎ.ಟಿ. ಶ್ರೀನಿವಾಸ, ಮಹದೇವ್ ಆರ್ ಹಾಗೂ ಗಿರೀಶ್ ಎಸ್, ರಾಜಕುಮಾರ್ ಕ್ರಮವಾಗಿ ಉತ್ತಮ ಅಭಿನಯ ನೀಡಲು ಪ್ರಯತ್ನಿಸಿದ್ದರು.

ನವಲಿಪಕ್ಕ, ಮಧುಹಂಸ, ಶಂಕರದತ್ತರಾಗಿ ಅಭಿನಯಿಸಿ ಸಭಿಕರನ್ನು ನಗೆಗಡಲಿಗೊಡ್ಡಿದ ಶಿವಪ್ಪ ಎಂ., ವಿದ್ಯಾ ಭಟ್ ಮತ್ತು ಕೃಷ್ಣರಾಜ್ ನೆಲ್ಲಿಯವರು ತಮ್ಮ ಇತಿಮಿತಿಗಳೊಳಗೆ ಚೆನ್ನಾಗಿಯೇ ತಮ್ಮ ತಮ್ಮ ಪಾತ್ರಗಳಿಗೆ ಜೀವ ತುಂಬುವಲ್ಲಿ ಯಶಸ್ವಿಯಾಗಿದ್ದಾರೆ.

ಮಹಾಭಾರತದ ಕಥೆ, ಘಟನೆಗಳು ನಾನಾ ವಿಧಗಳಲ್ಲಿ ವಿವರಿಸಲ್ಪಡುತ್ತಾ ಬಂದಿದ್ದು ಹನುಮಂತರಾವ್ ಭೀಮರಾವ ಕಂದಗಲ್ಲರ 'ರಕ್ತರಾತ್ರಿ' ಯಲ್ಲಿ ದ್ರೌಪದಿ, ಉತ್ತರೆ ಹಾಗೂ ಅಶ್ವತ್ಥಾಮರ ನಡುವೆ ನಡೆವ ವಾದ–ವಿವಾದಗಳು ಅಶ್ವತ್ಥಾಮನ ಕೃತ್ಯಗಳಿಂದ ನೊಂದ ದ್ರೌಪದಿ ಹಾಗೂ ಉತ್ತರೆಯರ ಕರುಳು ಕೊಯ್ದಂತಹ ರೋಧನ, ಸೇಡು ತೀರಿಸಿಕೊಳ್ಳಲಿಕ್ಕಾಗಿ ಪುರುಷರಿಗೆ ಸವಾಲೊಡ್ಡುವ ವೀರತನ, ಶೌರ್ಯ, ಕೃಷ್ಣನ ಕಪಟ ನಾಟಕ ಸೂತ್ರಗಳೆಲ್ಲವೂ ಅತ್ಯಂತ ಮಾರ್ಮಿಕವಾಗಿ ಮೂಡಿ ಬಂದವು.

ಸಂತೋಷ್ ಉಪಾಧ್ಯಾಯ ಹಾಗೂ ಸಂಗಡಿಗರ ಸರಳ ಸುಂದರ ಹಿನ್ನೆಲೆ ಸಂಗೀತ, ಶಶಿಕಾಂತ್ ಪಾಟೀಲರ ಪ್ರತಿಭಾವಂತ ವೇಷ–ಭೂಷಣಗಳೂ, ಹರಿಪ್ರಿಯ, ವಿನೋದ್ ಕುಮಾರ್ ಹಾಗೂ ಪ್ರಕಾಶ್ ಶೆಟ್ಟಿ ಉಳಿಪಾಡಿಯವರ ರಂಗ ಸಜ್ಜಿಕೆ ಬಹಳ ಅಚ್ಚುಕಟ್ಟಾಗಿದ್ದವು.

ಬೆಳಕು ಹಾಗೂ ರಂಗವಿನ್ಯಾಸ ಇನ್ನಷ್ಟು ಬೇಕು ಅನ್ನಿಸುತ್ತಿತ್ತು. ಇಂಗಳೇಶ್ವರರು ಪ್ರತಿ ಬಾರಿಯೂ ಒಂದೊಂದು ಹೊಸ ನಾಟಕವನ್ನು ಕೈಗೆತ್ತಿಕೊಂಡು ತಮ್ಮ ಪ್ರತಿಭೆಯನ್ನು ಹೊರಹಾಕುವ ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಅವರ ಇತ್ತೀಚಿನ 'ಉರುಗವ್ವ' ಹಾಗೂ ಈ 'ರಕ್ತ ರಾತ್ರಿ' ಅಂತಹ ಎರಡು ಉತ್ತಮ ಪ್ರಯೋಗಗಳಾಗಿವೆ.

ದೆಹಲಿಯಂತಹ ಅತ್ಯಂತ "ಬಿಸಿ" ನಗರದಲ್ಲಿ 20–22 ಮಂದಿ ಸಾಮಾನ್ಯ ಹವ್ಯಾಸಿ ಕಲಾವಿದರನ್ನು ಒಟ್ಟುಗೂಡಿಸಿ ಇಂತಹ ಪ್ರಯತ್ನಗಳನ್ನು ಮಾಡುವುದೇ ಒಂದು ದೊಡ್ಡ ಸಾಹಸ.

ಒಟ್ಟಿನಲ್ಲಿ ನಾಟಕ ನೆರೆದಿದ್ದ ನಾಟಕಾಸಕ್ತರಲ್ಲಿ ಹಲವಾರು ಪ್ರಶ್ನೆ, ಸಂಶಯ, ಆಶ್ಚರ್ಯಗಳನ್ನು ಮೂಡಿಸಿತು ಎಂದರೆ ಅತಿಶಯೋಕ್ತಿಯಾಗಲಾರದು. ದುರ್ಜಯನಾಗಿ ಮಾಸ್ಟರ್ ರಿತ್ವಿಕ್ ನೆಲ್ಲಿ ತನ್ನ ಬಾಲ ಪ್ರತಿಭೆಯನ್ನು ಮರೆದಿದ್ದಾನೆ. ಅ

*ಸಖಾರಾಮ ಉಪ್ಪೂರು*













# ರಕ್ತರಾತ್ರಿ ನಾಟಕದ ನನ್ನ ಅನುಭವ

*ರಕ್ತರಾತ್ರಿ ನಾಟಕದಲ್ಲಿ ಪಾತ್ರ ಮಾಡಿದ* ***ವಿದ್ಯಾ ಭಟ್*** *ಅವರು ತಮ್ಮ ದೆಹಲಿಯ ಕನ್ನಡ ರಂಗಭೂಮಿಯ ಅಪೂರ್ವ ಅನುಭವವನ್ನು ಅಭಿಮತದ ಓದುಗರಿಗೆ ಪ್ರಸ್ತುತ ಪಡಿಸಿದ್ದಾರೆ.*

ದೆಹಲಿಯ ದಿನಕರ ಪ್ರಸ್ತುತ ಪಡಿಸಿದ ಕರ್ನಾಟಕದ ಶೇಕ್ಸಪೀಯರ್ ಬಿರುದಾಂಕಿತ ಹನುಮಂತರಾವ ಭೀಮರಾವ ಕಂದಗಲ್ಲ ಅವರ ರಕ್ತರಾತ್ರಿ ಎಂಬ ಪೌರಾಣಿಕ ನಾಟಕದ ಆಯ್ದ ಎರಡು ಅಂಕಗಳು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ ಜುಲೈ 26ರಂದು ಪ್ರದರ್ಶನಗೊಂಡಿದ್ದು, ಹಲವಾರು ವರ್ಷಗಳ ನಂತರ ಮತ್ತೊಮ್ಮೆ ಪೌರಾಣಿಕ ನಾಟಕದ ಪ್ರಯೋಗವಾಗಿದೆ.

ಇದರಲ್ಲಿರುವ ಸಂಭಾಷಣೆಗಳೆಲ್ಲಾ ಅತ್ಯಂತ ಕ್ಲಿಷ್ಟಕರವಾಗಿದ್ದು ಇದನ್ನು ಕಲಿಯಲು ಎಲ್ಲಾ ಪಾತ್ರಧಾರಿಗಳು ಹರಸಾಹಸವೇ ಪಟ್ಟಿದ್ದೆವು. ಪ್ರಥಮ ರೀಡಿಂಗ್‌ಗೆ ಕರೆದಾಗ ನನಗೆ ಈ ನಾಟಕದ ಆಯ್ಕೆ ಬಗ್ಗೆ ತೃಪ್ತಿ ಇರಲಿಲ್ಲ, ಯಾಕೆಂದರೆ ಇದೊಂದು ಪೌರಾಣಿಕ ನಾಟಕವಾಗಿದ್ದು ಅತ್ಯಂತ ಕಷ್ಟಕರ ಸಂಭಾಷಣೆಯಿಂದ ಕೂಡಿದ್ದುದರಿಂದ ಇದು ಜನರ ಮನಮುಟ್ಟಲು ಸಾಧ್ಯವೇ ಇಲ್ಲ ಅನ್ನೋ ಅಭಿಪ್ರಾಯ ನನ್ನಲ್ಲಿತ್ತು. ನಂತರ ಕೆಲವೇ ದಿನಗಳಲ್ಲಿ ನಮ್ಮ ನಿರ್ದೇಶಕರಾದ ಶಿವಾನಂದ ಇಂಗಳೇಶ್ವರ ಅವರು ನನ್ನ ಈ ಅಭಿಪ್ರಾಯವನ್ನು ಅಲ್ಲಗಳಿಸಿದರು.

ನಾಟಕದ ಪ್ರಯೋಗ ಇನ್ನೇನು ಒಂದು ವಾರ ಇದ್ದಾಗಲೇ ಅನಿರೀಕ್ಷಿತವಾಗಿ ನಿರ್ದೇಶಕರ ತಾಯಿ ತೀರಿಕೊಂಡಿದ್ದರಿಂದ ಅವರು 3–4 ದಿನಗಳ ಕಾಲ ಊರಿಗೆ ತೆರಳಬೇಕಾಯಿತು. ಅಲ್ಲದೆ ಅವರು ಊರಿಗೆ ಹೋಗಿದ್ದಾಗ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಿಂದ ಪದವೀಧರೆಯಾಗಿರುವ ಪದ್ಮಶ್ರೀಯವರನ್ನು ಮಾರ್ಗದರ್ಶಕರಾಗಿ ಬರ ಹೇಳಿದ್ದರು. ಅದರಿಂದ ನಮಗೆ ಪದ್ಮಶ್ರೀಯವರಿಂದಲೂ ಕಲಿಯುವ ಅವಕಾಶ ದೊರೆತಂತಾಯಿತು.

ಇಂತಹ ಸಂದರ್ಭದಲ್ಲೂ ನಿರ್ದೇಶಕರು ಎದೆಗೊಂದದೆ, ತಮ್ಮ ಆತ್ಮ ಸ್ಥೈರ್ಯವನ್ನೂ ಕಳೆದುಕೊಳ್ಳದೆ ನಾಟಕಕ್ಕೆ ಮತ್ತು ಕಲಾವಿದರಿಗೆ ಏನೂ ಅಡ್ಡಿ ಆಗದಂತೆ ನೋಡಿಕೊಂಡರು. ಇಂಗಳೇಶ್ವರ್ ಅವರು ನಾನು ನೋಡಿದ ಅತ್ಯಂತ ಸರಳ, ಸಜ್ಜನ ಮತ್ತು ಸದಾ ಹಸನ್ಮುಖಿಯಾಗಿರುವ ವ್ಯಕ್ತಿಗಳಲ್ಲೊಬ್ಬರು. ಅವರ ನಗುವೇ ನಮಗೊಂದು ಪ್ರೇರಣೆ. ನಾವು ಅವರೊಂದಿಗೆ ಕೆಲಸ ಮಾಡಬೇಕಾದರೆ ನಾವು ಕಲಾವಿದರು ಅವರು ನಿರ್ದೇಶಕರು ಅನ್ನೋ ಭೇದಭಾವ ತೋರದೆ ನಾವೆಲ್ಲ ಒಂದೇ ಅನ್ನೊ ಧ್ಯೇಯವನ್ನು ಇಟ್ಟುಕೊಳ್ಳೋದು ಅವರ ವಿಶೇಷತೆ. ಅಷ್ಟೇ ಅಲ್ಲದೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಆಫೀಸಿನಲ್ಲಿ ಕೆಲಸಮಾಡಿ ನಂತರ ಸಂಘಕ್ಕೆ ಬಂದು ನಾಟಕಕ್ಕೆ ಬೇಕಾಗಿರುವ ಎಲ್ಲಾ ತಯಾರಿ ನಡೆಸಿ ನಮ್ಮನ್ನೆಲ್ಲಾ ಒಟ್ಟುಗೂಡಿಸಿ ಈ ನಾಟಕಕ್ಕೆ ಒಂದು ರೂಪ ಕೊಟ್ಟಿರುವುದು ಅವರದೊಂದು ದೊಡ್ಡ ಸಾಧನೆಯೇ ಅನ್ನಬೇಕು. ಅವರ ಜೊತೆ ನಾಟಕಕ್ಕಾಗಿ ಹಗಲೂ ರಾತ್ರಿ ನೆರಳಾಗಿ ಕೆಲಸ ಮಾಡಿದ ಸುಧೀರ್ ಫಡ್ನಿಸ್, ಯೋಗೇಂದ್ರ ಸಿಂಗ್ ಅಷ್ಟೇ ಅಲ್ಲದೆ ಸುಮಾರು 13 ಜನ ರಂಗದ ಮುಂದೆ ಪಾತ್ರಧಾರಿಗಳಾಗಿ ಮತ್ತು 15 ಕ್ಕೂ ಹೆಚ್ಚು ಜನ ರಂಗದ ಹಿಂದೆ ಕೆಲಸಮಾಡಿದವರನ್ನು ಮರೆಯಲು ಸಾಧ್ಯವಿಲ್ಲ.

ಇದು ನಾನು ಅಭಿನಯಿಸಿದ ಎರಡನೇ ನಾಟಕ. ನನ್ನ ಮೊದಲ ನಾಟಕ ಸೇವಂತಿ ಪ್ರಸಂಗ. ಇದಕ್ಕಿಂತ ಮುಂಚೆ ನಾನು ನಾಟಕಕ್ಕೆ ಕೇವಲ ಪ್ರೇಕ್ಷಕಳಾಗಿದ್ದೆ ಹೊರತು ನಾಟಕದ ಹಿಂದೆ ಇರುವ ಪರಿಶ್ರಮ ನನಗೆ ಗೊತ್ತಿರಲಿಲ್ಲ, ಹಾಗೆಯೇ ರಂಗಭೂಮಿಯ ಮಹತ್ವವೇನು? ಇದರಿಂದ ನಾವು ಏನೆಲ್ಲಾ ಪಡೆಯಲು ಸಾಧ್ಯ? ಅನ್ನೋ ವಿಚಾರ ನನಗೆ ತಿಳಿದಿರಲಿಲ್ಲ. ನಿಜವಾಗಿಯೂ ನಾವು ಈ ರಂಗಭೂಮಿಯಿಂದ ತುಂಬಾ ಲಾಭ ಪಡೆಯಲು ಸಾಧ್ಯ ಅನ್ನೋದು ಈಗ ಮನದಟ್ಟಾಗಿದೆ. ಇದು ನಮ್ಮ ಜೀವನ ಶೈಲಿಯನ್ನೇ ಬದಲಾಯಿಸುವುದರಲ್ಲಿ ಎರಡು ಮಾತಿಲ್ಲ. ಅಲ್ಲದೇ ನಾಟಕದಿಂದ ಸಮಾಜ ನಮ್ಮನ್ನು ಗುರುತಿಸುತ್ತದೆ. ಹಲವರು ನಮ್ಮ ಸ್ನೇಹಿತರಾಗುತ್ತಾರೆ. ಇಂದಿನ ಈ ಆಧುನಿಕ ಜೀವನ ಶೈಲಿಯಲ್ಲಿ ನಾವು ನಮ್ಮ ಫ್ಯಾಮಿಲಿ ಫ್ರೆಂಡ್ಸಗಳಿಗೂ ಸಮಯ ಕೊಡಲು ಅವಕಾಶ ಸಿಗದಿರುವಾಗ, ಇಂತಹ ರಂಗಭೂಮಿ ನಮ್ಮನ್ನೆಲ್ಲಾ ಒಟ್ಟುಗೂಡಿಸಿ, ಒಂದೇ ಕುಟುಂಬದಂತೆ ಅನ್ನೋನ್ಯವಾಗಿ ಇರಲು ಅವಕಾಶ ಮಾಡಿಕೊಡುತ್ತದೆ.

ಈ ತರಹದ ಸಾಂಸ್ಕೃತಿಕ ಚಟುವಟಿಕೆಗಳಿಗೆ ದೆಹಲಿ ಕರ್ನಾಟಕ ಸಂಘವು ಒಂದು ವೇದಿಕೆಯಾಗಿದ್ದು, ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ನಮಗೆಲ್ಲಾ ಅವಕಾಶ ಕೊಟ್ಟು, ಹುರಿದುಂಬಿಸಿ ಈ ರಂಗಮಂದಿರದಲ್ಲಿ ಕೆಲಸ ಮಾಡುವಂತೆ ಪ್ರೋತ್ಸಾಹಿಸುವ ಮೂಲಕ ಮಹತ್ವಪೂರ್ಣ ಪಾತ್ರವಹಿಸಿದ್ದಾರೆ. ಇಲ್ಲಿಗೆ ಬಂದಾಗ ನಮಗೆ ಸಿಗುವವರೆಲ್ಲಾ ನಮ್ಮವರು ಎಂಬ ಭಾವನೆಯ ಜೊತೆಗೆ ಇಲ್ಲಿ ಸಿಗೋ ಶಾಂತಿ, ನೆಮ್ಮದಿ, ಆನಂದ ಬೇರೆಲ್ಲೂ ಸಿಗದು, ಇದು ನನ್ನ ಅತಿಶಯೋಕ್ತಿ ಮಾತಲ್ಲ. ನನ್ನ ಅನುಭವದ ಮಾತು. ಅ

**ವಿದ್ಯಾ ಎನ್. ಭಟ್.**





# ದೆಹಲಿಯಲ್ಲಿ ಮೊದಲ ಬಾರಿಗೆ ರಾತ್ರಿಯಿ

ದೆಹಲಿಯಲ್ಲಿ ಮೊಟ್ಟ ಮೊದಲ ಬಾರಿ ಕರ್ನಾಟಕದ ಹೆಮ್ಮೆಯ ಕಲೆ ಯಕ್ಷಗಾನದ ಇಡೀ ರಾತ್ರಿ ಪ್ರದರ್ಶನವು ಇದೇ ಜುಲೈ 11ರ ರಾತ್ರಿ ನಡೆಯಿತು.

ದೆಹಲಿಯ ಯಕ್ಷಗಾನ ಅಭಿಮಾನಿಗಳು ಸೌತ್ ಕೆನರಾ ಕ್ಲಬ್ ಮತ್ತು ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನಗಳ ಆಶ್ರಯದಲ್ಲಿ ತೆಂಕುತಿಟ್ಟಿನ ಸುಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ಸಂಪೂರ್ಣ ಶ್ರೀ ದೇವೀ ಮಹಾತ್ಮೆ ಎಂಬ ಒಂದು ಲಕ್ಷಕ್ಕೂ ಅಧಿಕ ಪ್ರದರ್ಶನಗಳನ್ನು ಕಂಡಿರುವ ಅಪೂರ್ವ ಯಕ್ಷಗಾನ ಪ್ರಸಂಗವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಪ್ರದರ್ಶಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಕಟೀಲು ಶ್ರೀ ದುರ್ಗಾ ಪರಮೇಶ್ವರಿ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿ ಮತ್ತು ಕಾಸರಗೋಡು ಜಿಲ್ಲೆಯ ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ಕಲಾ ಮಂಡಳಿ, ಎಡನೀರು ಇವುಗಳಲ್ಲಿ ವೃತ್ತಿ ಯಕ್ಷಗಾನದಲ್ಲಿ ಹೆಸರುವಾಸಿಯಾದ ಆಯ್ದ ಕಲಾವಿದರ ತಂಡವು ದೆಹಲಿಗೆ ಬಂದು ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಸಾಂಪ್ರದಾಯಿಕವಾಗಿ ಪ್ರದರ್ಶನಗೊಳ್ಳುವ ರೀತಿಯಲ್ಲಿ ರಾತ್ರಿಯಿಡೀ ಪ್ರಸಂಗವನ್ನು ಆಡಿ ತೋರಿಸಿದರು. ಪ್ರತಿಭಾವಂತ ಕಲಾವಿದರ ಅದ್ಭುತ ಕುಣಿತ, ಮಾತುಗಾರಿಕೆ, ವೇಷಭೂಷಣ ಮತ್ತು ಬಣ್ಣಗಾರಿಕೆಯಿಂದ ಕೂಡಿದ ಅಪೂರ್ವ ಯಕ್ಷಗಾನ ಪ್ರದರ್ಶನವನ್ನು ತುಂಬಿ ತುಳುಕಿದ ಸಭಾಂಗಣದಲ್ಲಿ ದೆಹಲಿಯ ಯಕ್ಷಗಾನ ಪ್ರೇಮಿಗಳು ರಾತ್ರಿಯಿಡೀ ಎವೆ ಇಕ್ಕದೇ ನೋಡಿ ಆನಂದಿಸಿದರು.

ಹಿಮ್ಮೇಳದಲ್ಲಿ ಹಿರಿಯ ಭಾಗವತರಾದ ಬಲಿಪ ನಾರಾಯಣ ಭಾಗವತ, ಜನಪ್ರಿಯ ಗಾಯಕ ಪಟ್ಲ ಸತೀಶ್ ಶೆಟ್ಟಿ ಮತ್ತು ಪ್ರಫುಲ್ಲಚಂದ್ರ ನೆಲ್ಯಾಡಿ ಅವರು ಭಾಗವತಿಗೆ ಮಾಡಿದರು. ದೇಲಂತ ಮಜಲು ಸುಬ್ರಹ್ಮಣ್ಯ ಭಟ್, ಪದ್ಮನಾಭ ಉಪಾಧ್ಯ, ಅಡೂರು ಗಣೇಶ್ ರಾವ್ ಮತ್ತು ದೇವಾನಂದ ಭಟ್ ಮೀಜಾರು ಚೆಂಡೆ ಮತ್ತು ಮದ್ದಳೆಯನ್ನು ವಾದಿಸಿದರು. ಹಿರಿಯ ಯಕ್ಷಗಾನ ಪಾತ್ರಧಾರಿ ಸೂರಿಕುಮೇರಿ ಗೋವಿಂದ ಭಟ್ಟರು ರಕ್ತ ಬೀಜಾಸುರನ ಪಾತ್ರ ವಹಿಸಿದರೆ, ನಗ್ರಿ ಮಹಾಬಲ್ ರೈ ಅವರು ಮಹಿಷಾಸುರನ ವೇಷ ಮಾಡಿದರು. ಮಹಿಷಾಸುರನ ಪಾತ್ರವು ಸಾಂಪ್ರದಾಯಿಕವಾಗಿ ಸಂಘದ ಸಮುಚ್ಚಯದ ಹೊರ ಆವರಣದಿಂದ ತೆಂಗಿನ ಒಣಗರಿಗಳಿಂದ ಮಾಡಿದ ದೊಂದಿಗಳನ್ನು ಬೆಳಗಿಸುತ್ತಾ ಬೆಂಕಿಯ ಜ್ವಾಲೆಯನ್ನು ಬಾಯಿಯಿಂದ ಉಗುಳುತ್ತಾ ಕಲಾಪ್ರೇಮಿಗಳ ಸ್ವಾಗತದೊಂದಿಗೆ ವೇದಿಕೆಗೆ ಪ್ರವೇಶ ಮಾಡಿದ ಸೊಗಸು ದೆಹಲಿಯ ಯಕ್ಷಗಾನ ಪ್ರೇಮಿಗಳಿಗೆ ನಾಡಿನ ಕಲಾವಿದರ



ಅದ್ಭುತ ಕಲಾ ಪ್ರತಿಭೆಯ ನೋಟವನ್ನು ನೀಡಿತು. ಡಾ. ಪುರುಷೋತ್ತಮ ಬಿಳಿಮಲೆಯವರು ತಿಳಿಸುವಂತೆ ದೇವೀ ಮಹಾತ್ಮೆ ಆಟದಲ್ಲಿ ಮಹಿಷಾಸುರನ ಪ್ರವೇಶಕ್ಕೆ ವಿಚಿತ್ರವಾದ ಒಂದು ಶಕ್ತಿಯಿದೆ. ಈ ಪಾತ್ರವು ರಂಗಸ್ಥಳಕ್ಕೆ ಹೊರಗಿನಿಂದ ಪ್ರವೇಶವಾಗುತ್ತದೆ. ದೊಂದಿ, ವಾದ್ಯ, ಬೊಬ್ಬೆ ಮತ್ತು ಪಟಾಕಿಗಳ ಸಂಭ್ರಮದಲ್ಲಿ ಮಹಿಷಾಸುರನ ಪ್ರವೇಶವಾಗುವಾಗ ರಂಗ ಭೂಮಿ ನಾಲ್ಕು ಕಂಬಗಳ ನಡುವಿಗೆ ಸೀಮಿತವಾಗಿರದೆ, ಎಷ್ಟೋ ದೂರಕ್ಕೆ ಮತ್ತು ಎತ್ತರಕ್ಕೆ ವಿಸ್ತರಿಸಿಕೊಳ್ಳುತ್ತದೆ.












ಯಕ್ಷಗಾನ ಆರಂಭವಾಗುವುದಕ್ಕಿಂತ ಮುಂಚೆ ನಡೆದ ಚೌಕಿ ಪೂಜೆಯಲ್ಲಿ ಮಾಜೀ ವಾರ್ತಾಧಿಕಾರಿ ಶ್ರೀ ಐ. ರಾಮಮೋಹನ ರಾವ್, ಹಿರಿಯ ವಕೀಲರಾದ ಶರತ್ ಎಸ್. ಜವಳಿ, ಶ್ರೀಮತಿ ನೇತ್ರಾವತಿ ಮಯ್ಯ, ಶ್ರೀ ಕೆ. ಲಕ್ಷ್ಮಣ ಮಲ್ಯ, ಶ್ರೀ ಶೇಖರ್ ಬಂಗೇರ, ಶ್ರೀ ಬಸ್ತಿ ದಿನೇಶ್ ಶೆಣೈ, ಮೊದಲಾದ ಗಣ್ಯರು ಭಾಗವಹಿಸಿದ್ದರು. ಸ್ಥಳೀಯ ಕನ್ನಡ, ತುಳು ಸಂಘ ಸಂಸ್ಥೆಗಳು ಮತ್ತು ನಾಡಿನ ಗಣ್ಯರು, ಯಕ್ಷಗಾನದ ಪೋಷಕರು ಉದಾರ ದೇಣಿಗೆಯನ್ನು ನೀಡಿ ದೆಹಲಿಯಲ್ಲಿ ಇಡೀ ರಾತ್ರಿ ಯಕ್ಷಗಾನವನ್ನು ಯಶಸ್ವಿಗೊಳಿಸುವಲ್ಲಿ ಸಹಕರಿಸಿದ್ದಾರೆ ಎಂದು ಸಂಘಟಕರಲ್ಲೊಬ್ಬರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಹೇಳಿದ್ದಾರೆ.

ಗಮ್ಮತ್ತೆಂದರೆ ಜನ ಸಂಭ್ರಮಿಸಿವುದು ಇಂಥ ರಕ್ಕಸ ಪಾತ್ರಗಳಿಗೆ. ಇವರೆದುರು ಜನರಿಂದ ದೂರವಿರುವ ನಮ್ಮ ದೇವರುಗಳು ತುಂಬಾ ಸಪ್ಪೆ ಎನ್ನುತ್ತಾರೆ ಅವರು.

ಹರಿನಾರಾಯಣ ಭಟ್ ಎಡನೀರು ಮತ್ತು ಬಾಲಕೃಷ್ಣ ಮೀಜಾರು ಅವರ ಶುಂಭಾಸುರ ನಿಶುಂಭಾಸುರ ಪಾತ್ರಗಳು ದೊಡ್ಡ ಕಿರೀಟ ಧರಿಸಿದ ಯಕ್ಷಗಾನದ ಬಣ್ಣದ ವೇಷಗಳಿಂದ ಸಭಾಂಗಣದಲ್ಲಿ ಅಸುರಲೋಕವನ್ನು ಸೃಷ್ಟಿಸಿತಲ್ಲದೇ ಯಕ್ಷಗಾನದಲ್ಲಿ ಬಣ್ಣಗಾರಿಕೆ ಮತ್ತು ವೇಷಭೂಷಣಗಳ ಸೌಂದರ್ಯವನ್ನೂ ತೋರಿಸಿತು. ಮಧು ಮತ್ತು ಕೈಟಭರಾಗಿ ನಿಡ್ಲೆ ಗೋವಿಂದ ಭಟ್ ಮತ್ತು ಉಮೇಶ ಶೆಟ್ಟಿ ಉಬರಡ್ಕ ತಮ್ಮ ಸಮಯೋಚಿತ ಮಾತುಗಾರಿಕೆಯ ಮೂಲಕ ಮತ್ತು ಚಂಡಾಸುರ ಮತ್ತು ಮುಂಡಾಸುರನಾಗಿ ಚಂದ್ರಶೇಖರ ಧರ್ಮಸ್ಥಳ ಮತ್ತು ಮೊಹನ ಬೆಳ್ಳಿಪ್ಪಾಡಿ ಅಸಂಖ್ಯ ಧೀಂಗಣ ಕುಣಿತ ಮತ್ತು ನಿರರ್ಗಳ ಮಾತುಗಾರಿಕೆಗಳಿಂದ ರಂಗಸ್ಥಳವನ್ನು ಹುಡಿ ಮಾಡಿದರು.

# ...ಡೀ ಯಕ್ಷಗಾನ





ಗಣೇಶ್ ಕನ್ನಡಿಕಟ್ಟೆ ದೇವೇಂದ್ರ ಹಾಗೂ ಮಹೇಶನಾಗಿ, ವಸಂತ ಗೌಡ ಬ್ರಹ್ಮನಾಗಿ, ಮೋಹನ ಅಮ್ಮುಂಜೆ ವಿಷ್ಣುವಾಗಿ, ಆದಿ ಮಾಯೆಯಾಗಿ ಗಂಗಾಧರ ಪುತ್ತೂರು ಅಭಿನಯಿಸಿದರು. ದೇವಿ ಪಾತ್ರವನ್ನು ಪ್ರಖ್ಯಾತ ಪಾತ್ರಧಾರಿ ಪ್ರಶಾಂತ್ ಶೆಟ್ಟಿ ನೆಲ್ಯಾಡಿ ಮತ್ತು ವಿದ್ಯಾ ಕೋಳ್ಯೂರು ಅವರು ವಹಿಸಿದರು. ಮಾಲಿನಿಯ್ಯಾಭಿನಯಿಸಿದ ಜನಪ್ರಿಯ ಸ್ತ್ರೀವೇಷಧಾರಿ ಅಕ್ಷಯ್ ಕುಮಾರ್ ಅವರ ಯಕ್ಷಗಾನದ ಶಾಸ್ತ್ರೀಯ ನೃತ್ಯವು ಮನಸೂರೆಗೊಳಿಸಿತು. ಅದೇ ರೀತಿ ರಾಕೇಶ್ ರೈ ಅಡ್ಕ ಅವರು ವಿದ್ಯುನ್ಮಾಲಿಯಾಗಿ ಅಮೋಘ ಘೋರ ಅಭಿನಯವನ್ನು ತೋರಿಸಿದರು. ಜತೆಗೆ ಹರಿರಾಜ್ ಶೆಟ್ಟಿಗಾರ್, ಮಾಧವ ಕೊಳತ್ತಮಜಲು ಗಣೇಶ ಕನ್ನಡಿಕಟ್ಟೆ, ಪ್ರಶಾಂತ್ ಕಲ್ಲಡ್ಕ, ಸತೀಶ್ ನೀರ್ಕೆರೆ, ಮೊದಲಾದವರು ಅಮೋಘ ಅಭಿನಯದಿಂದ ಪ್ರೇಕ್ಷಕರ ಮನಗೆದ್ದರು. ವಿವಿಧ ಹಾಸ್ಯ ಪಾತ್ರಗಳಲ್ಲಿ ಮಹೇಶ್ ಮಣಿಯಾಣಿಯವರು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದರು. ದೆಹಲಿಯ ಯಕ್ಷಗಾನ ಪ್ರಿಯರು ರಾತ್ರಿಯಿಡೀ ಕುಳಿತು ಯಕ್ಷಗಾನವನ್ನು ಆನಂದಿಸಿದರು. ಅ

*ಬಾಲಕೃಷ್ಣ ನಾಯ್ಕ್ ಡಿ.*

## ಮರೆಯಲಾಗದ ಯಕ್ಷಗಾನದ ರಾತ್ರಿ

“ಸಂಪೂರ್ಣ ಶ್ರೀದೇವಿ ಮಹಾತ್ಮೆ” ಯಕ್ಷಗಾನದ ಪ್ರಸಂಗವನ್ನು ನೋಡಿ ಮೈ ಪುಳಕಿತಗೊಂಡಿತು. ಬಾಲ್ಯದಲ್ಲಿ ನಾವು ದೇವಸ್ಥಾನದ ಮುಂಭಾಗದಲ್ಲಿ, ಶಾಲಾ ಮೈದಾನದಲ್ಲಿ ನೋಡಿ ಆನಂದಿಸಿದ ನೆನಪುಗಳು ಮರುಕಳಿಸಿದವು.

ಒಂದು ಅದ್ಭುತ ಹಾಗೂ ಖುಷಿ ತಂದ ಅನುಭವ. ಮಧು-ಕೈಟಬರು, ಚಂಡ-ಮುಂಡರು, ಶುಂಭ-ನಿಶುಂಭರು, ಮಹಿಷಾಸುರ ಹೀಗೆ ಅಸುರರು ಒಂದೆಡೆಯಾದರೆ, ಬ್ರಹ್ಮ, ವಿಷ್ಣು, ಮಹೇಶ್ವರ, ದೇವೇಂದ್ರ ಹಾಗೂ ದೇವಿಯರು ಇನ್ನೊಂದೆಡೆ ಬಾರಿ ಬಾರಿಯಾಗಿ ಬಂದು ನಲಿದು-ಕುಣಿದು ಮನಸ್ಸಿಗೆ ಅಪ್ಯಾಯಮಾನವಾದ ಸ್ಥಿತಿಯನ್ನು ಸೃಷ್ಟಿಸಿದರೆ, ಮಾಲಿನಿಯಂತಹ ಸ್ತ್ರೀ ವೇಷದ ವೈಯಾರ, ನಾಟ್ಯ, ಸಂಗೀತ ಹಾಗೂ ದೂತ, ಪಾತ್ರಿ, ಪುರೋಹಿತನಾಗಿ ಮನರಂಜಿಸಿದ ಹಾಸ್ಯಗಾರನ ರಸದೌತಣ, ಹೊರಗೆ ನೀಡಲ್ಪಟ್ಟ ಚುರುಮುರಿ, ಪೋಡಿ ಹಾಗೂ ಚಹಾ! ಅಹಾ! ಅಹಾ! ಸ್ವರ್ಗಕ್ಕೆ ಕಿಚ್ಚು ಹಚ್ಚಲಿ ಅನ್ನಿಸಿತು. ಅ

*ಸಖಾರಾಮ ಉಪ್ಪೂರು*



# ಶ್ರೀ ದೇವಿ ಮಹಾತ್ಮೆ ಯಕ್ಷಗಾನದ ಮಹತ್ವ

ಯಕ್ಷಗಾನ ರಂಗಭೂಮಿಯಲ್ಲಿ ದೇವೀ ಮಹಾತ್ಮೆ ಪ್ರಸಂಗಕ್ಕೆ ವಿಶೇಷವಾದ ಒಂದು ಮಹತ್ವವಿದೆ. ವಸ್ತುವಿನ ದೃಷ್ಟಿಯಿಂದ ಈ ಕತೆಯು ಮೂಲತಃ ವೇದ ಪೂರ್ವ ಕಾಲದಲ್ಲಿ ಅಂದರೆ ಸುಮಾರು ಕ್ರಿಸ್ತಶಕ ಪೂರ್ವ 9ನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಮಾತೃ ಮೂಲೀಯ ಕುಟುಂಬ ವ್ಯವಸ್ಥೆಯನ್ನು ಸಂಕೇತಿಸುತ್ತದೆ.

ಸಂಖ್ಯಾ ದೃಷ್ಟಿಯಿಂದ ಅದು ಈಗಾಗಲೇ ಒಂದು ಲಕ್ಷಕ್ಕೂ ಮಿಕ್ಕು ಪ್ರದರ್ಶನಗಳನ್ನು ಕಂಡಿದೆ. ಜೊತೆಗೆ ಸುಮಾರು 16000 ಪ್ರದರ್ಶನಗಳನ್ನು 2027ರವರೆಗೆ ಇದೀಗ ಮುಂಗಡವಾಗಿಯೇ ಕಾದಿರಿಸಲಾಗಿದೆ.

ಪ್ರಸಂಗದ ಆರಂಭದಲ್ಲಿ ಬರುವ ಆದಿ ಮಾಯೆಯ ವೃತ್ತಾಂತ ಇದನ್ನು ಪರಿಣಾಮಕಾರಿಯಾಗಿ ಸೂಚಿಸುತ್ತದೆ. ಆದರೆ ಮುಂದಿನ ಸುಮಾರು 1000 ವರ್ಷಗಳಲ್ಲಿ ಇದು ಹಂತ ಹಂತವಾಗಿ ಪಿತೃಮೂಲೀಯ ಕುಟುಂಬ ವ್ಯವಸ್ಥೆಗೆ ತಿರುಗಿಕೊಂಡಿತು. ಈ ಸ್ಥಿತ್ಯಂತರದ ಕಾಲಘಟ್ಟದಲ್ಲಿ ಚಾಮುಂಡಿ, ಕಾಳಿ, ಸಪ್ತ ಮಾತೃಕೆಯರು, ರಕ್ತೇಶ್ವರಿ ಮೊದಲಾದ ಅನೇಕ ಮಾತೃದೇವತೆಗಳು ಕಾಣಿಸಿಕೊಂಡು ತಮ್ಮ ಕಾಲದ ಅಗತ್ಯಗಳನ್ನು ಪೂರೈಸಿದ್ದಾರೆ.

ಇವರಿಂದ ಹತರಾದ ಚಂಡ ಮುಂಡರು, ಮಹಿಷಾಸುರ, ರಕ್ತಬೀಜ, ಶುಂಭ ನಿಶುಂಬರೇ ಮೊದಲಾದ ಹಲವು ರಕ್ಕಸರು ಚರಿತ್ರೆಯ ಪರಿವರ್ತನೆಯ ಪೌರಾಣಿಕ ದಾಖಲೆಗಳು. ಹೀಗೆ ಸುಮಾರು ಒಂದು ಸಾವಿರ ವರ್ಷಗಳಲ್ಲಿ ಕಾಣಿಸಿಕೊಂಡ ಸಾಮಾಜಿಕ ಪರಿವರ್ತನೆಯನ್ನು ಯಕ್ಷಗಾನವು ಒಂದು ರಾತ್ರಿಯ ಪ್ರದರ್ಶನದಲ್ಲಿ ಸಾಂದ್ರವಾಗಿ ಹಿಡಿದಿಡುತ್ತದೆ.

ಅದ್ಭುತವಾದ ಬಣ್ಣಗಾರಿಕೆ, ವಿಶೇಷವಾದ ಕುಣಿತಗಳು, ಹಾಸ್ಯ, ಎಲ್ಲಕ್ಕಿಂತ ಮಿಗಿಲಾಗಿ ಪ್ರದರ್ಶನದುದ್ದಕ್ಕೂ ಕಾಣಿಸಿಕೊಳ್ಳುವ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಮತ್ತು ಪಿತೃಪ್ರದಾನ ಕುಟುಂಬ ವ್ಯವಸ್ಥೆಯ ನಡುವಣ ಸಂಘರ್ಷಗಳು ದೇವೀ ಮಹಾತ್ಮೆ ಯಕ್ಷಗಾನವನ್ನು ಅನನ್ಯಗೊಳಿಸಿವೆ. ಅ

*ಡಾ. ಪುರುಷೋತ್ತಮ ಬಿಳಿಮಲೆ*

# ಲೇಖಕಿ ಎಂ.ಎಸ್. ವೇದಾ ಅವರೊಂದಿಗೆ ದಿನಕರ ಕಲಾವಿದರ ಸಂವಾದ





ದೆಹಲಿಯ ದಿನಕರ ತಂಡವು ಮಾರ್ಚ್ 8, 2015 ರಂದು ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಎಂ.ಎಸ್. ವೇದಾ ಅವರ 'ಜಯ' ಕಾದಂಬರಿಯ ಆಯ್ದ ಭಾಗದ ಕಿರು ನಾಟಕ ರೂಪ 'ಯುದ್ಧ' ವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಪ್ರಯೋಗಿಸಿತ್ತು.

ದೆಹಲಿ ಕರ್ನಾಟಕ ಸಂಘದ ಕಲಾವಿದರ ತಂಡವು 'ಸೇವಂತಿ ಪ್ರಸಂಗ' ನಾಟಕ ಪ್ರದರ್ಶಿಸಲು ಮೈಸೂರಿಗೆ ಜೂನ್‌ನಲ್ಲಿ ಹೋದಾಗ ದಿನಕರ ತಂಡದ ವತಿಯಿಂದ ಎಂ. ಎಸ್. ವೇದಾ ಅವರನ್ನು ಸಂಪರ್ಕಿಸಿ ಮಹಿಳಾ ದಿನಾಚರಣೆಯ ಅಂಗವಾಗಿ ಕಿರು ನಾಟಕ 'ಯುದ್ಧ' ಪ್ರದರ್ಶಿಸಲು ಅನುಮತಿ ಕೊಟ್ಟಿದ್ದಕ್ಕಾಗಿ ಕೃತಜ್ಞತೆ ಅರ್ಪಿಸಲಾಯಿತು.


ಎ.ಟಿ. ಶ್ರೀನಿವಾಸ್, ವಿನೋದ ಕುಮಾರ, ಹರಿಪ್ರಿಯ, ಹಾಗು ಸ್ಥಳಿಯ ಸ್ನೇಹಿತರಾದ ಅಬ್ದುಲ್ ಕರೀಮ್ ಇವರು ತೊಣಚಿಕೊಪ್ಪಲಿನ ಒಂದು ಪ್ರಶಾಂತ ವಾತಾವರಣದಲ್ಲಿರುವ ಬಡಾವಣೆಯಲ್ಲಿದ್ದ ಖ್ಯಾತ ಬರಹಗಾರ್ತಿ ಎಂ.ಎಸ್. ವೇದಾ ಅವರ ಮನೆ 'ಆಲಂಪು'ಗೆ ಜೂನ್ 22, 2015 ರಂದು ಭೇಟಿ ನೀಡಿದರು. ದೆಹಲಿಯಿಂದ ಬಂದ ಅತಿಥಿಗಳನ್ನು ಸ್ವಾಗತಿಸಿದ ಎಂ.ಎಸ್. ವೇದಾ ಅವರಿಗೆ ತಂಡದಲ್ಲಿದ್ದ ಹರಿಪ್ರಿಯ ಅವರು ಎಲ್ಲರನ್ನು ಪರಿಚಯಿಸಿದರು. ಎ.ಟಿ ಶಿನಿವಾಸ ಅವರು ತಮ್ಮನ್ನು ಪರಿಚಯಿಸುತ್ತಾ ಅವರು ಕನಕಪುರದವರು; ಸುಮಾರು 21 ವರ್ಷಗಳಿಂದ ದೆಹಲಿಯಲ್ಲಿ ದೆಹಲಿ ಪೋಲಿಸ್ ಇಲಾಖೆಯಲ್ಲಿ ಕೆಲಸವನ್ನು ಮಾಡುತ್ತಾರೆ ಎಂದರು. ದೂರದ ಕರ್ನಾಟಕದಿಂದ ಬೇರೆ ಬೇರೆ ಕೆಲಸದ ನಿಮಿತ್ತ ಬಂದಿರುವ ಕನ್ನಡಿಗರು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಅನೇಕ ನಾಟಕಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮುಖಾಂತರ ಸಂತೃಪ್ತಿ ಹಾಗೂ ಸಂತೋಷ ಪಡೆಯುತ್ತಿದ್ದಾರೆ ಎಂದರು.

ಅಬ್ದುಲ್ ಕರೀಮ್ ಅವರು ಎಂ.ಎಸ್. ವೇದಾ ಅವರ 'ಜಯ' ಕಾದಂಬರಿಯ ಕುರಿತು ವಿಶ್ಲೇಷಣೆ, ಚರ್ಚೆ ಮತ್ತು ವಿಮರ್ಶೆಗಳನ್ನು ಮಾಡಿದರು. ವೇದಾ ಅವರು ಕೂಡ ಕಾದಂಬರಿಯ ಬಗ್ಗೆ ತುಂಬಾ ವಿವರವಾಗಿ ಮಾತಾಡಿದರು. ಅವರ ಸರಳತೆ, ಪ್ರೀತಿಯ ಮಾತುಗಳು ಅವರನ್ನು ಭೇಟಿಯಾದ ಎಲ್ಲರ ಹೃದಯವನ್ನು ತುಂಬಿಸಿ ಎಲ್ಲರ ಮನಸ್ಸಿಗೆ ಸಂತೋಷ ನೀಡಿತು. ವೇದಾ ಅವರಿಗೆ ದಿನಕರ ತಂಡದಿಂದ ಯುದ್ಧ ಕಿರು ನಾಟಕದ ವಿಡಿಯೊ ಸೀಡಿಯನ್ನು ಅವರು ವೀಕ್ಷಿಸಲು ನೀಡಲಾಯಿತು. ಮುಂಬರುವ ದಿನಗಳಲ್ಲಿ ವೇದಾ ಅವರು ಅವರ ಕೃತಿಗಳನ್ನು ರಂಗರೂಪಕ್ಕೆ ತರಲು ತನ್ನ ಅನುಮತಿಯನ್ನು ತಪ್ಪದೆ ನೀಡುವೆನೆಂದು ಭರವಸೆ ನೀಡಿದರು. ಕೃತಿಗಳನ್ನು ಬರೆದು ಸಮಾಜಕ್ಕೆ ಕೊಟ್ಟಮೇಲೆ ಅವು ಸಮಾಜಕ್ಕೆ ಸೇರಿದ್ದು ಹಾಗಾಗಿ ಅವುಗಳ ರಂಗರೂಪಕ್ಕೆ ಅವಶ್ಯ ಅನುಮತಿ ಕೊಡುವ ಭರವಸೆ ನೀಡಿದರು.

ದಿನಕರ ತಂಡದ ನಾಟಕದ ವೀಡಿಯೊ ನೋಡಿದ ವೇದಾ ಅವರು ಅದು ತುಂಬಾ ಚೆನ್ನಾಗಿ ಬಂದಿದೆ. ಅದಕ್ಕೆ ಯುದ್ಧ ಎಂಬ ಶೀರ್ಷಿಕೆ ಕೊಡುವ ಬದಲು ಕರ್ಣಾವಸಾನ ಎಂದು ಕೊಡಬಹುದಿತ್ತು ಎಂದರು. ನಾಟಕದಲ್ಲಿ ಕರ್ಣ ಮತ್ತು ಕುಂತಿಯ ಪಾತ್ರವೇ ಮುಖ್ಯವಾಗಿತ್ತು. ಕರ್ಣ ಮತ್ತು ಕುಂತಿಯ ಮುಖಾಂತರ ದ್ರೌಪದಿಯ ಸಂಬಂಧ ತೆರೆದುಕೊಳ್ಳುತ್ತ ಹೋಗುವಂತಹ ಸಂದರ್ಭವಿದೆ. ಕರ್ಣನ ಸಾವಿನ ವಿಷಯವನ್ನು ತಿಳಿದುಕೊಂಡಿದ್ದ ಕುಂತಿ ಅವನನ್ನು ಹುಡುಕಿಕೊಂಡು ಬರುವಂತಹ ಸ್ಥಿತಿಯೂ ಇದೆ ಎಂದು ಅವರು ಹೇಳಿದರು. ರಂಗ ಪರಿಕರಗಳನ್ನು ಕೂಡಾ ಬಳಸಬಹುದಿತ್ತು ಎಂದು ಅವರು ವಿವರಿಸಿದರು. ನಾಟಕದ ಕೊನೆಯಲ್ಲಿ ತೋರಿಸಿದ ಚಿತ್ರವು ತುಂಬಾ ಚೆನ್ನಾಗಿದ್ದು ಜಯಾ ಕಾದಂಬರಿಯ ಮುಖಪುಟವನ್ನು ಹೋಲುತ್ತದೆ ಎಂದರು. ಅ

*ಎ.ಟಿ. ಶ್ರೀನಿವಾಸ*

# ಭಾರತ ಕಂಡ ಮುಂಚೂಣಿ ಸ್ವಾತಂತ್ರ್ಯ ಹೋರಾಟಗಾರ ಮತ್ತು ರೈತನಾಯಕ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ



ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನು ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯದ ಕಹಳೆಯನ್ನು ಊದಿದ ಮೊದಲ ಹೋರಾಟಗಾರ. ಇತಿಹಾಸದ ಮಾಹಿತಿಯ ಪ್ರಕಾರ ಭಾರತದ ಮೊದಲ ಸ್ವಾತಂತ್ರ್ಯ ಹೋರಾಟ ನಡೆದದ್ದು 1839ರಲ್ಲಿ, ಆದರೆ ರಾಯಣ್ಣ 1824ರಲ್ಲಿಯೇ ಮೊದಲ ಕಿತ್ತೂರಿನ ಯುದ್ಧದಲ್ಲಿ ಬ್ರಿಟೀಷರ ವಿರುದ್ಧ ಹೋರಾಟ ಮಾಡಿ ಪ್ರಾರಂಭಿಕ ಯಶಸ್ಸು ಕಂಡಿದ್ದರು. ಇತಿಹಾಸದ ಬರಹಗಾರರಿಗೆ ರಾಯಣ್ಣನ ಮಾಹಿತಿಯ ಕೊರತೆಯಿಂದಲೋ ಅಥವಾ ಸಂಬಂಧಿಸಿದ ಕರ್ನಾಟಕದ ಇತಿಹಾಸಕಾರರ ಮತ್ತು ಸರ್ಕಾರದ ನಿರಾಸಕ್ತಿಯಿಂದಲೋ ಭಾರತೀಯರ ಜನಮಾನಸದಲ್ಲಿ ರಾಯಣ್ಣನ ಸ್ವಾತಂತ್ರ್ಯ ಹೋರಾಟದ ಸಂಪೂರ್ಣ ಮಾಹಿತಿ ದಾಖಲೆಯಾಗಲಿಲ್ಲ, ಹೀಗಾಗಿ ಭಾರತಿಯರು ಕರ್ನಾಟಕದ ಒಬ್ಬ ನಿಸ್ವಾರ್ಥ ಸ್ವಾತಂತ್ರ್ಯ ಹೋರಾಟಗಾರನ ಪರಿಚಯದಿಂದ ಅಂದಿನಿಂದ ಇಂದಿನವರೆಗೂ ವಂಚಿತರಾಗಿದ್ದಾರೆ.

ರಾಯಣ್ಣನು ಸಾಮಾನ್ಯವಾದ ಯುದ್ಧಮಾರ್ಗವನ್ನು ಅನುಸರಿಸದೆ ಗೆರಿಲ್ಲಾ ಯುದ್ಧ ತಂತ್ರವನ್ನು ಅನುಸರಿಸಿ ಬ್ರಿಟೀಷರ ಖಜಾನೆ, ಸರ್ಕಾರಿ ಕಛೇರಿ ಮತ್ತು ಅವರ ಸೈನ್ಯದ ವಿರುದ್ಧ ದಾಳಿಯನ್ನು ಮಾಡಿ ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದರು. ಭಾರತದಲ್ಲಿ ಗೆರಿಲ್ಲಾ ಯುದ್ಧ ಪರಿಣತಿ ಹೊಂದಿದ ಪ್ರಪ್ರಥಮ ಯೋಧ ಎಂಬ ಕೀರ್ತಿ ರಾಯಣ್ಣನಿಗೆ ಸಲ್ಲುತ್ತದೆ. ರಾಯಣ್ಣ ಸ್ವತಃ ಒಬ್ಬ ರೈತನೂ ಆಗಿ ರೈತರ ಸಂಕಷ್ಟಗಳನ್ನರಿತು ರೈತವಿರೋಧಿ ಬ್ರಿಟಿಷರ, ಹಣದಾಹಿ ಜಮೀನ್ದಾರರ ವಿರುದ್ಧ ಹೋರಾಟಕ್ಕೆ ನಿಂತ ಮೊಟ್ಟ ಮೊದಲ ಕನ್ನಡಿಗ. ಟಿಪ್ಪುವಿನ ಮರಣಾನಂತರ ಬ್ರಿಟೀಷರು ಬೆಳೆಯ ಆಧಾರದ ಮೇಲಿದ್ದ ಭೂ ತೆರಿಗೆ ನೀತಿಯನ್ನು ತಿದ್ದುಪಡಿ ಮಾಡಿ ಭೂಮಿಯ ಅಳತೆಯ ಆಧಾರದ ಮೇಲೆ ಮಾಡಿ ಹೆಚ್ಚಿನ ಕಂದಾಯದ ಹೊರೆ ರೈತರ ಮೇಲೆ ಹೇರಿದರು, ಹಾಗಾಗಿ ರೈತರು ಸಂಕಷ್ಟಕ್ಕೆ ಸಿಲುಕಿ ತೆರಿಗೆ ಕಟ್ಟಲಾಗದೆ ತಮ್ಮ ಜಮೀನನ್ನು ಕಳೆದುಕೊಂಡು ಕಂಗಾಲಾಗಿದ್ದರು. ಅವರ ಸಂಕಷ್ಟವನ್ನು ಅರಿತ ರಾಯಣ್ಣ ಸುತ್ತಮುತ್ತಲಿನ ಊರಿನ ಎಲ್ಲಾ ಜಾತಿ-ಧರ್ಮದ ಸಹಸ್ರಾರು ರೈತರು ಮತ್ತು ದೇಶಾಭಿಮಾನಿಗಳನ್ನು ಒಗ್ಗೂಡಿಸಿ ತನ್ನದೇ ಸೈನ್ಯವನ್ನು ಕಟ್ಟಿ ಬ್ರಿಟೀಷರ ಮತ್ತು ಹಣದಾಯಿ ಜಮೀನ್ದಾರರ ವಿರುದ್ಧ ಹೋರಾಟವನ್ನು ತನ್ನದೇ ರೀತಿಯಲ್ಲಿ ಪ್ರಾರಂಭಿಸಿದ್ದರು. ಎಲ್ಲಾ ಜಾತಿ-ಧರ್ಮದವರೊಂದಿಗೆ ಸಾಮೂಹಿಕ ಊಟಮಾಡುವುದನ್ನು ರೂಢಿಗೆ ತಂದು ಜನರಲ್ಲಿ ಒಗ್ಗಟ್ಟಿನ ಮನೋಭಾವವನ್ನು ತುಂಬಿದ್ದರು, ಅದರಿಂದ ಹೋರಾಟಕ್ಕೆ ಮತ್ತಷ್ಟು ಚೈತನ್ಯ ಮತ್ತು ಸ್ಫೂರ್ತಿಯೂ ಸಿಕ್ಕಂತಾಯಿತು. ಬ್ರಿಟೀಷರು ರಾಯಣ್ಣನನ್ನು ನೇರವಾಗಿ ಹಿಡಿಯಲು ಅಸಮರ್ಥರಾಗಿ ಆತನ ಸಂಬಂಧಿಕರಿಗೆ ಆಮಿಷವೊಡ್ಡಿ ಅವರ ಸಹಾಯದಿಂದ ಬಂಧಿಸಿ ಜನವರಿ 26 1931 ರಂದು ಗಲ್ಲಿಗೇರಿಸಿದರು.

ಸಂಗೊಳ್ಳಿ ರಾಯಣ್ಣ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ನೇಗಿನಹಾಳ ಗ್ರಾಮದಲ್ಲಿ 15 ಅಗಸ್ಟ 1798 ರಲ್ಲಿ ಜನಿಸಿದ್ದರು. ಕಾಕತಾಳಿಯವೆಂಬಂತೆ 1947ರಲ್ಲಿ ಅಗಸ್ಟ 15ರಂದೇ ಬ್ರಿಟೀಷರಿಂದ ಭಾರತಕ್ಕೆ ಸ್ವಾತಂತ್ರ ದೊರಕಿದೆ. ಆಶ್ಚರ್ಯ ಪಡುವ ಮತ್ತೊಂದು ಕಾಕತಾಳಿಯ ಸಂಗತಿಯೆಂದರೆ ಸಂಗೊಳ್ಳಿ ರಾಯಣ್ಣನನ್ನು ಗಲ್ಲಿಗೇರಿಸಿದ್ದು 26 ಜನವರಿ 1831, ಭಾರತವು ಗಣರಾಜ್ಯವೆಂದು ಘೋಷಿಸಿದ ದಿನಾಂಕ ಕೂಡಾ 26 ಜನವರಿ.

ರಾಯಣ್ಣರನ್ನು ದೇಶಕ್ಕಾಗಿ ತಮ್ಮ ಅಮೂಲ್ಯವಾದ ಜೀವವನ್ನೇ ತ್ಯಾಗ ಮಾಡಿದ ಸುಮಾರು ಎರಡು ಶತಕಗಳ ನಂತರವಾದರೂ ಅವರಿಗೆ ಸಲ್ಲಿಸಬೇಕಾದ ಗೌರವವನ್ನು ಸಲ್ಲಿಸಲು ಕರ್ನಾಟಕ ರಾಜ್ಯ ಸರ್ಕಾರವು ಸಂಗೊಳ್ಳಿ ರಾಯಣ್ಣನ ಜನ್ಮದಿನದಂದೆ ಬೆಂಗಳೂರು ಕೇಂದ್ರ ರೈಲ್ವೆ ನಿಲ್ದಾಣವನ್ನು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ ಎಂದು ಮರು ನಾಮಕರಣ ಮಾಡುವ ನಿರ್ಧಾರವನ್ನು ಹೊಂದಿದ್ದು ಈ ಮೂಲಕ ಅನೇಕ ದಿನಗಳ ಕನ್ನಡದ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ. ಈ ಸಾಧನೆಗೆ ರಾಜ್ಯ ಸರ್ಕಾರಕ್ಕೆ ಅಭಿನಂದನೆ.

ರಾಯಣ್ಣ ನಂತಹ ಇನ್ನೂ ಹಲವಾರು ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರ ಉಲ್ಲೇಖ ಇತಿಹಾಸದಲ್ಲಿ ಕಾರಣಾಂತರಗಳಿಂದ ದಾಖಲೆಯಾಗದ ಕಾರಣ ಇನ್ನು ಮುಂದೆಯಾದರು ನಮ್ಮ ಇತಿಹಾಸಕಾರರು ಸಂಶೋಧನೆ ಮಾಡಿ ಬೆಳಕಿಗೆ ತರುವ ನಿಟ್ಟಿನಲ್ಲಿ ಕೆಲಸ ಮಾಡಲಿ ಎಂಬ ಆಶಯ ಹೊಂದಿರುತ್ತೇವೆ ಅ

*ಮಹಾದೇವ ಆರ್, ಪ್ರಧಾನ ಕಾರ್ಯದರ್ಶಿ,*
*ಸಂಗೊಳ್ಳಿ ರಾಯಣ್ಣ ಅಭಿಮಾನಿಗಳ ಬಳಗ.*

# ಜನಕಪುರಿ ಕನ್ನಡ ಕೂಟದಿಂದ
## ಕೆ.ಟಿ. ಗೌಡರಿಗೆ ಕೂಟರತ್ನ ಪ್ರಶಸ್ತಿ ಪ್ರದಾನ



ದೆಹಲಿಯ ಜನಕಪುರಿ ಕನ್ನಡ ಕೂಟವು ಪ್ರತಿ ವರ್ಷದಂತೆ ನೀಡುವ ಕೂಟರತ್ನ ಪ್ರಶಸ್ತಿಯನ್ನು ಈ ವರ್ಷ ಶ್ರೀ ಕೆ.ಟಿ. ಗೌಡ ಅವರಿಗೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಜುಲೈ 25ರಂದು ಹಮ್ಮಿಕೊಂಡಿದ್ದ ಮಹಿಳಾ ಮತ್ತು ಮಕ್ಕಳ ದಿನಾಚರಣೆ ಹಾಗೂ ಕೂಟರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನೀಡಿ ಗೌರವಿಸಿತು.

ಶ್ರೀ ಕೆ.ಟಿ. ಗೌಡ ಅವರು ಜನಕಪುರಿ ಕನ್ನಡ ಕೂಟದ ಹಿತೈಷಿಗಳೂ ಹಾಗೂ ಕೂಟರತ್ನ ಪ್ರಶಸ್ತಿಯ ಕಲ್ಪನೆಯನ್ನು ಹುಟ್ಟುಹಾಕಿ ಅದಕ್ಕೆ ಮೂರ್ತ ರೂಪವೊಂದನ್ನು ನೀಡಿದವರು. ಪ್ರತಿ ವರ್ಷ ಈ ಕಾರ್ಯಕ್ರಮಕ್ಕೆ ತಮ್ಮದೇ ಆದ ರೀತಿಯಲ್ಲಿ ಪ್ರೋತ್ಸಾಹ ನೀಡುತ್ತಾ ಬಂದಿರುವ ಶ್ರೀ ಕೆ.ಟಿ.ಗೌಡ ಅವರಿಗೆ ಈ ವರ್ಷದ ಕೂಟ ರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಿದ್ದು ಈ ಬಾರಿಯ ವಿಶೇಷ.

ಕೂಟ ರತ್ನ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶ್ರೀಯುತ ಕೆ.ಟಿ.ಗೌಡ ಅವರು ತಾವೇ ಆರಂಭಿಸಿದ್ದ ಈ ಸಂಪ್ರದಾಯವನ್ನು ಜನಕಪುರಿ ಕನ್ನಡ ಕೂಟ ಚಾಚೂ ತಪ್ಪದೆ ನಡೆಸಿಕೊಂಡು ಬರುತ್ತಿರುವುದನ್ನು ಶ್ಲಾಘಿಸಿದರು. ಕೂಟ ರತ್ನ ಪ್ರಶಸ್ತಿ ಪತ್ರವನ್ನು ಡಾ. ಶಶಿಕುಮಾರ್ ಅವರು ಓದಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಖ್ಯಾತ ವಿಜ್ಞಾನಿ ಹಾಗೂ ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯಲ್ಲಿ ಸಲಹೆಗಾರರಾಗಿರುವ ಡಾ. ಎಸ್. ಆರ್. ರಾವ್ ಅವರು ಮಾತನಾಡಿ ತಾವು ತಮ್ಮ ಮೂವತ್ತಕ್ಕೂ ಹೆಚ್ಚು ವರ್ಷಗಳ ಸುದೀರ್ಘ ಕಾಲ ಹೊರನಾಡ ಕನ್ನಡಿಗನಾಗಿ ವಾಸವಾಗಿದ್ದು ಸಾಮಾಜಿಕ ಹಾಗೂ ಸಾಂಸ್ಕೃತಿಕ ಒಡನಾಟವನ್ನು ಹೆಚ್ಚು ಬೆಳೆಸಿಕೊಳ್ಳಲಾಗಲಿಲ್ಲ. ಆದರೆ ಇಂತಹ ಕಾರ್ಯಕ್ರಮಗಳನ್ನು ನೋಡಿದ ಮೇಲೆ ಅಂತಹ ಒಡನಾಟದ ಮಹತ್ವ ಏನೆಂಬುದು ನನಗೆ ತಿಳಿದಿದೆ ಎಂದರು. ಪ್ರತಿಯೊಂದು ಸಂಘ ಸಂಸ್ಥೆಗಳಲ್ಲಿ ಒಳ್ಳೆಯ ಕಾರ್ಯಕ್ರಮಗಳನ್ನು ಏರ್ಪಡಿಸಿದಲ್ಲಿ ಭಾಷಾ ಸಮುದಾಯಗಳನ್ನು ಒಂದುಗೂಡಿಸುವ ಕೆಲಸ ಸುಲಭ ಸಾಧ್ಯವೆಂಬುದನ್ನು ಮನವರಿಕೆ ಮಾಡಿಕೊಟ್ಟರು.

ಕಾರ್ಯಕ್ರಮದ ಮತ್ತೊಬ್ಬ ಗೌರವ ಅತಿಥಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿದ್ದು ಪ್ರತಿಯೊಬ್ಬರು ಮಹಿಳೆಯರನ್ನು ಗೌರವದಿಂದಲೂ ಮಕ್ಕಳನ್ನು ಪ್ರೀತಿ ವಿಶ್ವಾಸದಿಂದ ನಡೆಸಿಕೊಂಡಾಗ ಸಮಾಜದಲ್ಲಿನ ಸ್ವಾಸ್ಥ್ಯ ಕಾಪಾಡಲು ಸಾಧ್ಯವೆಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿದ್ದ ಚಿಂತಕ, ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡುತ್ತ ಹೊರನಾಡಿನಲ್ಲಿ ಬಂದು ನೆಲೆಸಿರುವ ಹಲವಾರು ಕನ್ನಡಿಗರು ವಿವಿಧ ವೃತ್ತಿಗಳಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಅಂತವರನ್ನು ಗುರುತಿಸಿ ಕರೆತಂದು ನಮ್ಮ ಸಂಘ ಸಂಸ್ಥೆಗಳು ಅವರನ್ನು ಇತರ ಕನ್ನಡ ಭಾಷಿಕರಿಗೆ ಪರಿಚಯಿಸುವ ಕೆಲಸ ಮಾಡಬೇಕೆಂಬ ಸಲಹೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿ, ಗೌರವ ಅತಿಥಿ, ಹಾಗೂ ವಿಶೇಷ ಆಹ್ವಾನಿತರಿಗೆ ವಿಶೇಷ ಸನ್ಮಾನ ಮಾಡಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ಅವರು ಮಾತನಾಡಿ ಜನಕಪುರಿ ಕನ್ನಡ ಕೂಟ ಕಾರ್ಯಕ್ರಮಗಳು ಇನ್ನೂ ಹೆಚ್ಚು ಹೆಚ್ಚು ಉತ್ತಮವಾಗಿ ನಡೆಯಲು ಎಲ್ಲ ಹೊರನಾಡ ಕನ್ನಡಿಗರು ಹಾಗು ಇತರರು ಸಹಕಾರ ನೀಡಬೇಕೆಂದು ಕೋರಿದರು.

ಜನಕಪುರಿ ಮಹಿಳಾ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಮೀರಾ ನಾಡಿಗ್, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಜನಕಪುರಿ ಕನ್ನಡ ಕೂಟದ ಕಾರ್ಯದರ್ಶಿ ಶ್ರೀ ಗಂಗಾಧರ್ ಹಾಗೂ ಕೂಟರತ್ನ ಪ್ರಶಸ್ತಿ ಪುರಸ್ಕೃತ ಶ್ರೀ ಕೆ.ಟಿ ಗೌಡರ ಧರ್ಮಪತ್ನಿ ಶ್ರೀಮತಿ ಶಶಿಕಲಾ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಈ ಕಾರ್ಯಕ್ರಮವು ಕುಮಾರಿ ನಿತ್ಯ ಈಟಿಯವರ ಪ್ರಾರ್ಥನೆ ಹಾಗೂ ಜನಕಪುರಿ ಕನ್ನಡ ಮಹಿಳಾ ಮಂಡಳಿಯ ಸದಸ್ಯರ ನಾಡಗೀತೆಯೊಂದಿಗೆ ಪ್ರಾರಂಭಗೊಂಡಿತು. ಕಾರ್ಯಕ್ರಮದಲ್ಲಿ ಜನಕಪುರಿ ಕನ್ನಡ ಕೂಟದ ಸದಸ್ಯರು ಹಾಗೂ ಮಕ್ಕಳು ಮಹಿಳೆಯರು ವಿವಿಧ ಹಾಡುಗಳು ಹಾಡಿದರು ಹಾಗೂ ವೈವಿಧ್ಯಮಯವಾದ ನೃತ್ಯಗಳನ್ನು ಪ್ರದರ್ಶಿಸಿದರು.

ಕಾರ್ಯಕ್ರಮಕ್ಕೆ ರಾಯಚೂರಿನಿಂದ ಸುಗಮ ಸಂಗೀತದ ತಂಡವನ್ನು ಆಮಂತ್ರಿಸಿ ಅವರಿಂದ ಸುಮಧುರವಾದ ಜನಪದಗೀತೆಗಳು, ಭಾವಗೀತೆ, ಲಾವಣಿಗಳು ಮತ್ತಿತರ ಜಾನಪದ ಪ್ರಕಾರಗಳ ಹಾಡುಗಳನ್ನು ಪ್ರಸ್ತುತ ಪಡಿಸಲಾಯಿತು.

ಶ್ರೀ ಎನ್.ಪಿ. ಚಂದ್ರಶೇಖರ್ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಎಲ್ಲರನ್ನು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಗಂಗಾಧರ ಅವರು ವಂದನಾರ್ಪಣೆ ಮಾಡಿದರು. ಶ್ರೀ ಎಸ್.ಎಲ್. ಭಂಡಾರ್‌ಕರ್ ಅವರು ಹಾಗೂ ಶ್ರೀಮತಿ ಸವಿತಾ ಇನಾಂದಾರ್ ಅವರು ತುಂಬ ಅಚ್ಚು ಕಟ್ಟಾಗಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ಅ

*ಎನ್.ಪಿ.ಚಂದ್ರಶೇಖರ್*







## ಭಾವನೆಯ ಬಳ್ಳಿ

# ದಸ್ತಕ್

ದೆಹಲಿಯ ಹಿರಿಯ ಕನ್ನಡತಿ **ಡಾ. ಅಹಲ್ಯಾ ಚಿಂತಾಮಣಿ** ಅವರು ತಮ್ಮ ನೆನಪಿನಂಗಳದಿಂದ ತೆಗೆದ ಕೆಲವು ಅಪೂರ್ವ ಕ್ಷಣಗಳ ಕುಸುಮಗಳು ಈ ಸಲದ **ಭಾವನೆಯ ಬಳ್ಳಿ**ಯಲ್ಲಿ ಅರಳಿವೆ

ಅತ್ತೆ ಮನೆ ವಾರಾಣಾಸಿ. 1962ನೇ ಇಸವಿಯಲ್ಲಿ ನಾನು ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಸಸ್ಯಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿ ಪಡೆದು ಪಿ.ಎಚ್.ಡಿ.ಗೆ ನೊಂದಾಯಿಸಿಕೊಂಡು ಪರಿಶೋಧನೆಗೆ ಸೇರಿಕೊಂಡಿದ್ದೆ. ನನ್ನದು ಅವಿಭಕ್ತ ಕುಟುಂಬ. ನನ್ನ ಹಿರಿಯ ಮಗ ಆಗ ಎರಡು ವರುಷದ ಮಗು. (5ನೇ ಸೆಪ್ಟೆಂಬರ್ 2015 ಶುಕ್ರವಾರ ಸಂಜೆ ನನ್ನನ್ನಗಲಿ ದೇವರೆಡೆಗೆ ಹೋಗಿಬಿಟ್ಟ).

ನನ್ನಯಜಮಾನ ಚಿಂತಾಮಣಿಯವರೂ ಸಹ ಪಂಡಿತ ಹಜಾರಿ ಪ್ರಸಾದ್ ದ್ವಿವೇದಿಯವರ ಮಾರ್ಗದರ್ಶನದಲ್ಲಿ ಭಾಷಾ ವಿಜ್ಞಾನದಲ್ಲಿ ಪಿ.ಎಚ್.ಡಿ. ಮಾಡಲು ಬಿ.ಎಚ್.ಯು. ನಲ್ಲಿ ಪ್ರಾರಂಭಿಸಿದ್ದರು. ನಮ್ಮತ್ತೆ ಮಾವಂದಿರ ಎಲ್ಲಾ ಸಹಕಾರದಿಂದ ನಾವು ಓದುತ್ತಿದ್ದೆವು.

ಆ ಸಮಯದಲ್ಲಿ ಮಧ್ಯಪ್ರದೇಶದಲ್ಲಿ ಖಂಡವಾ–ಬುಸಾವಲ್ ಮಧ್ಯೆ ಬುರ್ಹಾನ್‌ಪುರ ಎಂಬ ಶಿಖರದಲ್ಲಿ ಬೊಹರಾ ಮುಸ್ಲಿಮ್ ಪ್ರಥಮ ಡಿಗ್ರಿ ಕಾಲೇಜುಗಳು ತೆರೆದು, ಅಧ್ಯಾಪಕರನ್ನು ನೇಮಿಸಲು ವೃತ್ತಪತ್ರಿಕೆಯಲ್ಲಿ ಪ್ರಕಟಿಸಿದರು.

ನಾನು ಮತ್ತು ನನ್ನ ಪತಿ ಇಬ್ಬರೂ ಸಹ ಸಾದ ಬಿಳಿ ಕಾಗದದಲ್ಲಿ ಅರ್ಜಿ ಹಾಕಿದೆವು. ನಮ್ಮ ಅದೃಷ್ಟವೋ ಏನೋ, ಬಿ.ಎಚ್.ಯು.ನಲ್ಲಿ ಓದಿದವರು ಮೇಧಾವಿಗಳೆಂದು ತಿಳಿದು ತುರ್ತು ತಂತಿಯ ಮೂಲಕ ಕೆಲಸದ ಕರೆ ಬಂದು 17ನೇ ಜುಲೈಗೆ ಕೆಲಸಕ್ಕೆ ಸೇರಬೇಕೆಂದು ತಿಳಿಸಿದರು. ಆಶ್ಚರ್ಯ, ಆತಂಕ, ಮುಂದಿನ ಭವಿಷ್ಯ, ಮನೆಯಲ್ಲಿ ವಿಚಾರ ವಿಮರ್ಶೆ ನಮ್ಮ ನಮ್ಮ ಪಿ.ಎಚ್.ಡಿ. ಮಾರ್ಗದರ್ಶಕರ ಅಸಮಾಧಾನ, ಅನುಮಾನ, ಸಲಹೆ ಎಲ್ಲವನ್ನೂ ಅರ್ಥೈಸಿಕೊಂಡು ನಾವು ದಂಪತಿ ಕಾಶೀ ವಿಶ್ವೇಶ್ವರನನ್ನು ಪ್ರಾರ್ಥಿಸಿಕೊಂಡು, ಹಿರಿಯರ ಆಶೀರ್ವಾದ ಪಡೆದು ಬುರ್ಹಾನ್‌ಪುರಕ್ಕೆ ಪ್ರಯಾಣ ಬೆಳೆಸಿದೆವು.

ನಮ್ಮತ್ತೆ ಮಾವ ನನ್ನ ಮಗನನ್ನು ಪರ ಊರಿಗೆ ಕಳಿಸಲು ಇಚ್ಛೆ ಇಲ್ಲದೆ ತಮ್ಮಲ್ಲೇ ಇರಿಸಿಕೊಂಡರು. ಅವರ ಅತೀವ ಪ್ರೀತಿ ನನ್ನ ತೊಳಲಾಟದ ಮಿಶ್ರಣ ನನ್ನನ್ನು ಮೂಕಳನ್ನಾಗಿ ಮಾಡಿತ್ತು. ಸಂದಿಗ್ಧ ಪರಿಸ್ಥಿತಿ.

ನನಗೆ ಅಂದು ಇದು ಮೊಟ್ಟ ಮೊದಲ ನೌಕರಿ–ಹೆದರಿಕೆ, ಭಯ, ಆತಂಕ ನನ್ನ ಮನಸ್ಸನ್ನು ಗಲಿಬಿಲಿ, ಗೊಂದಲಕ್ಕೀಡು ಮಾಡಿತ್ತು. ಯಾರು ಏನು ಹೇಳಿದರೂ ಆಗಲಿ ಎನ್ನುವ ಸ್ವಭಾವ ನನ್ನದು. ಕಾಲೇಜಿನ ಹೆಸರು ಸಯ್ಯದ್ ಖಾದಿರಿಯಾ ಬೊಹ್ರಾ ಫಸ್ಟ್ ಗ್ರೇಡ್ ಕಾಲೇಜು ಎಂದು ಸಾಗರ್ ವಿಶ್ವವಿದ್ಯಾಲಯದ ಕಾಯಿದೆ ಕಾನೂನಿಗೆ ಒಳಗೊಂಡಿತ್ತು. ನಮಗೆ ಕೊಡುತ್ತಿದ್ದ ಸಂಬಳ, ತಿಂಗಳಿಗೆ 295 ರೂಪಾಯಿಗಳು. ಪತಿ ಪತ್ನಿಯರಿಬ್ಬರೂ ಸೇರಿ 580 ರೂಪಾಯಿಗಳು ತಿಂಗಳಿಗೆ. ಬಹಳ ಸಂತೋಷಪಟ್ಟೆವು. ಕಾಲಾಯ ತಸ್ಮೈನಮಃ ಹೇಗೆ ಹೇಗೆ ಆಗುವುದೋ ಅದರಂತೆ ಬದುಕುವುದು ಕ್ಷೇಮ ಎಂದುಕೊಂಡು ಸಮಾಧಾನದಿಂದ ಹೊಸ ಶಹರಿನಲ್ಲಿ ಹೊಸ ರೀತಿಯಲ್ಲಿ ಬದುಕು ಕಂಡುಕೊಂಡೆವು.

ನಾನು 1958 ರಿಂದ 1962 ರವರೆಗೆ ಅಲಹಾಬಾದ್–ಪ್ರಯಾಗ ಸಂಗೀತ ಸಿತಾರ್ ಕಲಿತು ವಿಶೇಷ ಪ್ರಥಮ ದರ್ಜೆಯಲ್ಲಿ ನಾಲ್ಕು ವರುಷಗಳ ಡಿಪ್ಲೋಮಾದಲ್ಲಿ ತರಬೇತಿ ಪಡೆದಿದ್ದೆ. ಅದು ಬಿ.ಎ. ಡಿಗ್ರಿಗೆ ಸಮಾನವಾಗಿತ್ತು. ಸಂಗೀತ ಸಮಿತಿಯಿಂದ ಸಿತಾರ್ ಕಲಿತು ವಿಶೇಷ ಪ್ರಥಮ ದರ್ಜೆಯಲ್ಲಿ ನಾಲ್ಕು ವರುಷದ ಡಿಪ್ಲೋಮಾದಲ್ಲಿ ತರಬೇತಿ ಪಡೆದು ತೇರ್ಗಡೆ ಹೊಂದಿದ್ದೆ. ಅದು ಕೂಡಾ ಬಿ.ಎ. ಡಿಗ್ರಿಗೆ ಸಮಾನದ ಕೋರ್ಸ್ ಆಗಿತ್ತು. ನಾನು ಹೊಸತನದ ಹರುಷದಿಂದ ಸಿತಾರನ್ನು ಬುರ್ಹಾನ್ ಪುರಕ್ಕೆ ತೆಗೆದುಕೊಂಡು ಹೋಗಿದ್ದೆ. ನನಗೆ ಸಿತಾರ್ ನುಡಿಸುವುದನ್ನು ಕಲಿಸಿದವರು ಪಂಡಿತ ರವಿಶಂಕರ್‌ರವರ ಪ್ರಥಮ ವಿದ್ಯಾರ್ಥಿ ರಾಜಭಾನ್ ಸಿಂಗ್‌ರವರು. ಮನೆಗೇ ಬಂದು ಪಾಠ ಹೇಳಿ ಕೊಡುತ್ತಿದ್ದರು. ಎರಡು ಘಂಟೆ ನನ್ನ ಮಗನನ್ನು ತನ್ನ ತೊಡೆಯ ಮೇಲೆ ಆಟ ಆಡಿಸುತ್ತಾ ಕೂರಿಸಿಕೊಂಡು ರಾಗಗಳ ವಿಶಿಷ್ಟತೆ ಇತ್ಯಾದಿ ಹೇಳಿಕೊಟ್ಟ ಗುರುಗಳು ಅವರು! ಅವರು ನನಗೆ ಸಿತಾರ್ ಕಲಿಸುವುದು–ನಾನು ಅವರಿಗೆ ಆಂಗ್ಲ ಭಾಷೆ ಕಲಿಸುವುದು ಎಂಬ ವಾಗ್ದಾನವಾಗಿತ್ತು.

ಹೊಸ ಸ್ಥಳ, ಜನ ನಡವಳಿಕೆ ಭಾಷೆ, ಊಟ ತೊಡಿಗೆಗೆ ಹೊಂದಿಕೊಂಡು ಕೆಲಸ, ಬದುಕು ಶುರು ಮಾಡಿದೆವು.

ಮಹಿಳಾ ವಿದ್ಯಾಲಯಕ್ಕೆ ಬೊಹರಾ ಹುಡುಗಿಯರು ಬುರಖಾ ಹಾಕಿಕೊಂಡು ಜಟಕಾದಲ್ಲಿ ಬರುತ್ತಿದ್ದರು. ನಾನು ನಡೆದುಕೊಂಡು ಹೋಗುತ್ತಿದ್ದೆ. ಜಾತಿಯ ನಿಯಮಗಳಿಗೆ ಅವರುಗಳು ಬಹಳ ಕಟ್ಟುನಿಟ್ಟು. ಮೊದಲನೇ ದಿನ ಪಾಠ ಮಾಡುವಾಗ ಕೈಕಾಲು ನಡುಗುತ್ತಿತ್ತು. ಪೂರ್ತಿ ಬಾಟನಿಯನ್ನೇ ಹಿಂದಿನ ರಾತ್ರಿ ಬಾಯ್ಪಾಟ ಮಾಡಿಕೊಂಡಿದ್ದೇನೆಂದರೆ ಆಶ್ಚರ್ಯವಿಲ್ಲ. ಯಾಕೆಂದರೆ ನನ್ನ ಗುರುಗಳು, ಮೊದಲ ಇಂಪ್ರೆಶನ್ ಕೊನೆಗೂ ಉಳಿಯುವ ಇಂಪ್ರೆಶನ್ ಎಂದು ಹಾರೈಸಿ ಕಳುಹಿಸಿಕೊಟ್ಟಿದ್ದರು. ಆದಿನ ಹಾಗೂ ಹೀಗೂ ಎಲ್ಲಾ ಹುಡುಗಿಯರ, ಪರಿಚಯ, ಹೆಸರು, ಕುಲಗೋತ್ರ ವಿಚಾರಿಸುವುದರಲ್ಲೇ ತೊಡಗಿಸಿಕೊಂಡು ಅವರ ಮನಗೆದ್ದಿದ್ದೆ.

ಒಂದು ದಿನ ಸಾಯಂಕಾಲ, ಸಿತಾರ್ ನುಡಿಸೋಣ ಎಂದು ತೆಗೆದುಕೊಂಡು ಶೃತಿ ಮಾಡಿ ಬಾರಿಸಲು ಶುರುಮಾಡಿದೆ. ನಮ್ಮ ಯಜಮಾನರು ತಮ್ಮ ಕೆಲಸದಲ್ಲಿ ತೊಡಗಿದ್ದರು. ಸ್ವಲ್ಪ ಹೊತ್ತಾದ ನಂತರ ಸುಮಾರು 7–71/2 ಹೊತ್ತಿಗೆ ಬಾಗಿಲು ಬಡಿದ ಶಬ್ದವಾಯಿತು. ಯಜಮಾನರು ಎದ್ದು ಬಾಗಿಲು ತೆರೆದರೆ. . . ಕಂಡದ್ದೇನು? 3–4 ಪುರುಷರು ಹೂವು ಸುತ್ತಿಕೊಂಡು ವಿಚಿತ್ರ ರೀತಿಯಲ್ಲಿ ವೀಳ್ಯದೆಲೆ ಜಗಿಯುತ್ತಾ ನಿಂತಿದ್ದರು. ನೀವೇ ಅರ್ಥ ಮಾಡಿಕೊಳ್ಳಿರಿ, ಆ ಊರಿನಲ್ಲಿ ಗೌರವಾನ್ವಿತ ಮನೆಯಲ್ಲಿ ಹಾಡು, ಸಂಗೀತ, ನೃತ್ಯ ಕೇವಲ ದೇವದಾಸಿಯರಿಗೆ, ತವಾಯಿಫ್‌ಗಳಿಗೆ ಮಾತ್ರ ಸೀಮಿತವಂತೆ. ಬುರ್ಹಾನ್‌ಪುರದಲ್ಲಿ 60% ಬೊಹರಾ ಬಂಧುಗಳು, 25.3% ಗುಜರಾತಿಗಳು,

## ಬುರ್ಹಾನ್‌ಪುರ್‌ನ ವಿಶೇಷತೆಯ ಬಗ್ಗೆ ಇನ್ನೊಂದು-ಮತ್ತೊಂದೆರಡು

ಬುರ್ಹಾನ್‌ಪುರ ಶಹರ 7 ಮೈಲಿ ಪರಿಧಿಯ ಸುತ್ತಳತೆಯ ಗೋಡೆಯೊಳಗೆ ಇತ್ತು. ಒಂದು ವರ್ಷ ನಾವಲ್ಲಿದ್ದಾಗ ಕೇವಲ ನಾಲ್ಕು ಕನ್ನಡ ಕುಟುಂಬಗಳು ವಾಸಿಸುತ್ತಿದ್ದೆವು. ಒಬ್ಬ ಮನೆಗೊಬ್ಬರು ಹೋಗಲು ಜಟಕಾಗಾಡಿಯಲ್ಲಿ ಹೋಗುತ್ತಿದ್ದೆವು. ತಿಂಡಿ, ಊಟ, ಸರಸ, ಹಾಸ್ಯ, ಸಂಗೀತ ಎಲ್ಲಾ ನಾಲ್ಕು ಬಾರಿ ನಡೆಸಿದವು.

ಬುರ್ಹಾನಪುರ ಶಹರದಲ್ಲಿ ಜೈನಾಬಾದ್ ತೋಟ ಎಂಬ ತೋಟ ಹೊರವಲಯದಲ್ಲಿ ತಪತಿ ದಡದಲ್ಲಿದೆ 1631ನೇ ಇಸವಿಯಲ್ಲಿ ದಕ್ಷಿಣ ಸಮತಟ್ಟಿನಲ್ಲಿ ಮೇಲೆ ಶಹಜಹಾನ್ ತನ್ನ ಪತ್ನಿ ಮಮ್ತಾಜ್ ಮಹಲ್ ಮತ್ತು ಸೈನಿಕರೊಡನೆ ಧಾಳಿ ಇಟ್ಟ ಆ ಸಮಯದಲ್ಲಿ ಮಮ್ತಾಜಳು 14ನೇ ಶಿಶುವಿಗೆ ಜನ್ಮವಿತ್ತು ಕಾಲವಾದಳು. ಅವಳಿಗೆ ಆಗ ಕ್ಷಯರೋಗವಿತ್ತೆಂದೂ ಊಹೆ. ಆಗ ಶಹಜಹಾನ್ ಅವಳನ್ನು ಆ ತೋಟದಲ್ಲಿ ತಾತ್ಕಾಲಿಕವಾಗಿ ದಫನ್ ಮಾಡಿದ್ದು ನಂತರ ಆಗ್ರಾದಲ್ಲಿ ಅವಳ ನೆನಪಿನಲ್ಲಿ ತಾಜ್‌ಮಹಲ್ ಕಟ್ಟಿಸಿ (ಅದನ್ನು ಕಟ್ಟಲು 22 ವರುಷಗಳು ಆಯಿತಂತೆ) ಬುರ್ಹಾನ್‌ಪುರ್‌ನಿಂದ ಅವಳ ಶವವನ್ನು ತೆಗೆಸಿ ಚಿನ್ನದ ಪೆಟ್ಟಿಗೆಯಲ್ಲಿ ತಂದು ತಾಜ್‌ಮಹಲಿನಲ್ಲಿ ಹೂಳಿ ದಫನ್ ಮಾಡಿದನೆಂದು ಪ್ರತೀತಿ. ನಾವು ಸ್ನೇಹಿತರೊಡನೆ ಆ ತೋಟವನ್ನು ನೋಡಲು ಹುಣ್ಣಿಮೆ ರಾತ್ರಿ ಬುತ್ತಿ ಕಟ್ಟಿಕೊಂಡು ಹೋಗಿದ್ದೆವು. ಆಗ ನಾವೆಲ್ಲರೂ ಲೆಕ್ಚರರ್ ಆಗಿದ್ದೆವು. ಎಲ್ಲರೂ ಯುವಕ, ಯುವತಿಯರು. ತೋಟ ತುಂಬಾ ಸುಂದರವಾಗಿತ್ತು. ಊಟ ತಿಂಡಿ ಎಲ್ಲಾ ಮನ ಮೋಜಿನಿಂದ ಉಂಡು, ನಂತರ ಎಲ್ಲರೂ ಸುತ್ತಾಡಲು ಪ್ರಾರಂಭಿಸಿದೆವು. ಹೆಂಗಸರೆಲ್ಲಾ ಬಿಳಿ ಉಡುಗೆ ತೊಟ್ಟಿದ್ದೆವು. ಇದ್ದಕ್ಕಿದ್ದಂತೆ ಮೇರೆ ಸಾಯ ಎಂಬ ಹಿಂದಿ ಹಾಡುತ್ತಾ ನನ್ನ ಗೆಳತಿ ಮುಚ್ಚಾಟವಾಡಲು ಶುರುಮಾಡಿದಳು. ನನಗೆ ಯಾವುದೋ ಮೋಹಿನಿ ಕಾಣಿಸಿ ಭಯವಾಯಿತು. ಅಬ್ಬಾ ಆ ರೌದ್ರ ಸೌಂದರ್ಯ, ಹುಣ್ಣಿಮೆ ಬೆಳಕಿನ ರಾತ್ರಿ, ನದಿ ತಟ! ಊಹಿಸಿಕೊಂಡರೆ ಈಗಲೂ ಮೈನವಿರೇಳುತೆ.

**ಅಸಿರ್‌ಘರ್ ಕೋಟೆ** :– ಸಾತ್‌ಪುರ ಬೆಟ್ಟಗಳಿಂದ ಸುತ್ತಲುಪಟ್ಟ ಈ ಕೋಟೆ ಶಹರದಿಂದ 22 ಕಿಲೋ ಮೀಟರ್ ಇದೆ. ನರ್ಮದ ಮತ್ತು ತಪತಿಯಿಂದ ಸುತುವರಿದಿದೆ. ಅದನ್ನು ಅಸ್ ಅಹಿರ್‌ಯವನು ಮೊಗಲರ ಕಾಲದಲ್ಲಿ ಕಟ್ಟಿದನೆಂದು ಪ್ರತೀತಿ. ಆಗ ರಾಜ ಅಲಿ ಖಾನ ಆ ಕೋಟೆಯಲ್ಲಿ ಆಳುತ್ತಿದ್ದನು.

ಮಧ್ಯಪ್ರದೇಶದವರು ಮತ್ತು ಇತರೇ ಭಾಗದ ಹಿಂದುಗಳು 10%. ಕಾಲೇಜಿನಲ್ಲಿ ಕೋಣೆಯಲ್ಲಿ ಹುಡುಗಿಯರು ಗಜ್ಜಲ್ ಶಾಯರಿ ಆಗಾಗ್ಗೆ ಹೋಗುತ್ತಿದ್ದರು. ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಅವಕಾಶವಿರಲಿಲ್ಲ.

ಆದಿನ ಸಂಜೆ ಬಾಗಿಲಲ್ಲಿ ನಿಂತ ಜನರನ್ನು ನೋಡಿ ನನಗೆ ಆಗಲೇ ರೀಲಿಸ್ ಆಗಿದ್ದ "ದಸ್ತಕ್" ಚಲನಚಿತ್ರ ನೆನಪಾಯಿತು. ನಮ್ಮ ಯಜಮಾನರು ಹಾಗೂ ಹೀಗೂ ಅವರುಗಳಿಗೆ ಸಮಜಾಯಿಸಿ ಕಳುಹಿಸಿಕೊಟ್ಟು ನಂತರ ಒಳಗೆ ಬಂದು "ಮೊದಲು ಆ ಸಿತಾರ್ ಬಚ್ಚಿಡು ಎಂದು ಫರ್ಜಿಸಿದರು" ಎಂತಹ ಅನುಭವ! ಆ ಕಾಲೇಜಿನಲ್ಲಿ ನಾನು ಒಂದು ವರುಷ ಕೆಲಸ ಮಾಡಿದೆ. ಅದೇ ಸಮಯದಲ್ಲಿ ಸಾಗರ್ ಯುನಿವರ್ಸಿಟಿಯ ಸೆನೆಟ್ ಮೆಂಬರ್ ಆಗಿ ಚುನಾಯಿತಳಾಗಿ ನನ್ನ ಆ ಕಾಲೇಜಿನ ಪ್ರಗತಿಗೆ ಪ್ರಯತ್ನಪಟ್ಟೆ. ನಾನು ದಿನೇ ದಿನೇ ಹುಡುಗಿಯರಿಗೆ ಆತ್ಮ ವಿಶ್ವಾಸ ದೊರಕಿಸಿಕೊಟ್ಟು ಕಾಲೇಜಿನ ವಾರ್ಷಿಕೋತ್ಸವಕ್ಕೆ ತಯಾರು ಮಾಡಿ ಆಟ ಪಾಟ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಿಸಿ ಸಾಕಷ್ಟು ಸುಧಾರಣೆಗೆ ಕಾರಣಳಾದೆ. ಮೊದಲ ಬ್ಯಾಚಿನ ಹುಡುಗಿಯರನ್ನು ಬ್ಯಾಡ್ಮಿಂಟನ್ ಆಟಕ್ಕೆ ತರಬೇತಿ ಕೊಟ್ಟು ಭೂಪಾಲ್‌ಗೆ ಟೂರ್ನಮೆಂಟ್‌ಗೆ ಕರೆದುಕೊಂಡು ಹೋದೆ. ಬಾಟನಿಕಲ್ ಎಕ್ಸ್‌ಕರ್ಶನ್‌ಗಾಗಿ ಕಾಲೇಜಿನಿಂದ ಹಣ ಪಡೆದು ಸುತ್ತ ಮುತ್ತ ಹಳ್ಳಿಗೆ ಕರೆದುಕೊಂಡು ಹೋಗಿ ಜಯಭೇರಿ ಹೊಡೆದೆ.

ಅಲ್ಲಿನ ಶ್ರೀಮಂತ ಮಹಮದೀಯರು ಬಹಳ ಸಭ್ಯರು. ಬಡವರು ಬಹಳ ಬವಣೆಪಡುತ್ತಿದ್ದರು. ಒಂದು ತಿಂಗಳು ಹಿಂದುಗಳು ಗಣೇಶ ಪೂಜೆಗೆ ರಜಾ ಕೊಡುತ್ತಿದ್ದರು. ಮಧ್ಯದಲ್ಲಿ ಬೇರೆ ರಜೆಗಳಿರಲಿಲ್ಲ.

ಓದಿದವರೆಂದು ನಮಗೆ ಬಹಳ ಗೌರವ ಕೊಡುತ್ತಿದ್ದರು. ಅಂತೂ ಇಂತೂ ಆಗ ಆದ ಅನುಭವ ನನಗೆ ರೋಮಾಂಚಕ ಅನಿರ್ವಚನೀಯ. ಇದರ ಸುಳಿಯಲ್ಲಿ ಸಿಕ್ಕಾಗ ಹೊರಬರಲು ಬಹಳ ಸಾಹಸವಿರಬೇಕಲ್ಲವೇ! ಅ

***ಡಾ. ಅಹಲ್ಯಾ ಚಿಂತಾಮಣಿ***

## ನನ್ನ ಸವಿನೆನಪುಗಳು

ಆ ಸಮಯದಲ್ಲಿ ಅದಿಲ್ ಶಹನನ್ನು ಕೆಳಗಿಳಿಸಲು ತನ್ನ ಸೈನಿಕರನ್ನು ಕಳುಹಿಸಿದನೆಂದು ತಿಳಿದು ಬರುತ್ತೆ. ಅದಿಲ್ ಶಹ ತನ್ನ ಸೈನಿಕರೊಂದಿಗೆ ಬೇಕಾದ ಸಾಮಗ್ರಿಗಳೊಡನೆ ಆ ಕೋಟೆಯಲ್ಲಿ ಅವಿತುಕೊಂಡು ಆಹಾರ ಮುಗಿಯುವಾಗ ಆರು ತಿಂಗಳಲ್ಲಿ ಕೋಟೆಯ ಒಳಗೇ ಸತ್ತು ಹೋದನೆಂದು ಚರಿತ್ರೆ ಹೇಳುತ್ತೆ.

ಅಲ್ಲಿ ಕೋಟೆಯಲ್ಲಿ ಒಂದು ಸುಂದರ ಶಿವಾಲಯ ಮತ್ತು ಮಸ್ಜೀದ್ ಅಕ್ಕಪಕ್ಕದಲ್ಲಿವೆ. ಈಗಲೂ ಪ್ರತಿದಿನ ಬೆಳಗಿನ ಯಾವ ಅಶ್ವತ್ಥಾಮ ಶಿವನಿಗೆ ಹೂವಿನಿಂದ ಪೂಜಿಸುತ್ತಾನೆಂದು ಪ್ರತ್ಯಕ್ಷವಾಗಿ ಕೆಲವರು ನೋಡಿರುವುದಕ್ಕಾಗಿ ಹೇಳುತ್ತಾರೆ.

ಅಶ್ವತ್ಥಾಮ ಯುಗ ಪುರುಷ, ವಿಷ್ಣುವಿನ ಅವತಾರ 'ಯುಗೇ ಯುಗೇ ಸಂಭವಾಮಿ' ಎನ್ನುವುದು ನಮ್ಮ ಭಾರತದ ಭಕ್ತರ ನುಡಿ. ಆದರೆ ಈ ಸ್ಥಳಗಳು ಪ್ರವಾಸಿಗಳಿಗೆ ಹೆಸರುವಾಸಿಯಾಗಿದೆ. ನನಗೆ ಆಗಾಗ್ಗೆ ಏನೇನೋ ಹಳೇ ನೆನಪುಗಳು ಅವುಗಳ ಸುಳಿಯಲ್ಲಿ ಸಿಕ್ಕಿಬಿಡುತ್ತೇನೆ. ಅ

***ಡಾ. ಅಹಲ್ಯಾ ಚಿಂತಾಮಣಿ***

## 'ವಿಶ್ವ ವಿದ್ಯಾರ್ಥಿಗಳ ದಿನಾಚರಣೆ'

ಮಿಸ್ಸೈಲ್ ಮ್ಯಾನ್ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ
ರಾಮೇಶ್ವರ ಧನುಷ್ಕೋಟಿಯಲ್ಲಿ ಹುಟ್ಟಿದ ನಿಸ್ಸೀಮ ॥
ಇಂಜಿನಿಯರ್, ಪ್ರಾಧ್ಯಾಪಕರು, ಭಾರತ ರತ್ನ ಪ್ರಶಸ್ತಿಗೆ ಬಾಜನರು
ಭಾರತದ ಮೊದಲ ಸ್ಯಾಟಲೈಟ್ ಹಾರಿಸಿ ವಿಶ್ವದ ಕೀರ್ತಿಗೆ
ಪಾತ್ರರು
ವಿಜ್ಞಾನ ಯುಗದ ಮಂಗಳ ಮೂರ್ತಿ ಇವರು
ಕ್ಷಿಪಣಿ ಮನುಷ್ಯನೆಂಬ ಹೆಗ್ಗಳಿಕೆ ಹೆಸರಾದವರು ॥
ಅಧಿಕಾರ ಮೋಹಕ್ಕೆ ಬಲಿಯಾದವರಲ್ಲ
ಅಹಮಿತಾ ಬಾವವು ಇವರಿಗಿನಿತಿಲ್ಲ ॥
ರಾಜನೀತಿಯಲ್ಲಿ ಕೈಹಾಕಿದವರಲ್ಲ
ರಾಜ ಪದವಿಗೆ ತಲೆಬಾಗಿದವರಲ್ಲ ॥
ರಾಷ್ಟ್ರಪತಿ ಪಟ್ಟವನ್ನೇರಿದ ಮೊದಲ ವಿಜ್ಞಾನಿ
ಭಾರತದ ಕೀರ್ತಿಗೆ ಧ್ವಜವನ್ನೇರಿಸಿದ ಜ್ಞಾನಿ ॥
ನಿರ್ಮಲ ಸ್ವಭಾವದ ಸುವಿಚಾರದ ಆಗರ
ಮೃದು ಮಧುರದ ಪಕ್ಷ ಆಡಳಿತರಾಗ ॥
ಭಾರತೀಯರು ನಾವು ಇಂದು ನಮಿಸುವೆವು
ಜುಲೈ 27 ಇವರ ಐಕ್ಯದ ದಿನವು ॥
ಯುಗಯುಗದ ತಪಸ್ಸಿನ ಸ್ಫೂರ್ತಿಯ ಸೆಲೇ
ಮಾನವೀಯ ಮೌಲ್ಯಗಳ ಉತ್ತೇಜಿಸುವ ಕಲೆಗಾರ ॥
ಮನುಕುಲ ಕೋಟಿಗೆ ಸಂಭ್ರಮದ ದಿನವಾಗಲೆಂದು
ಸಕಲ ವಿಶ್ವ ವಿದ್ಯಾರ್ಥಿಗಳ ದಿನಾಚರಣೆ ಆಗಲಿ ಇಂದು ॥

***ವಿ.ವಿ. ಬಿರಾದಾರ***

## ಶ್ರದ್ಧಾಂಜಲಿ

ಎ.ಪಿ.ಜೆ. ಅಬ್ದುಲ್ ಕಲಾಮರಿಗೆ!
ಎಲ್ಲಿಂದಲೋ ಬಂದ ನೀನು ದೇಶದ
ಉತ್ತುಂಗವನೇರಿದೆ ! 'ಪೇಪರ್ ಬಾಯ್'
ವಿಜ್ಞಾನಿ, 'ಮಿಸೈಲ್ ಮೇನ್', ಬ್ರಹ್ಮಚಾರಿ
ಸರಳ ಜೀವಿ, ಪ್ರಾಮಾಣಿಕ, ನವ
ಜನಾಂಗದ ಭವಿಷ್ಯದ ಚಿಂತಕ,
ಬಡವ, ಧೀನ, ದಲಿತರ, ಹಿಂದುಳಿದವರ
ಕಷ್ಟ–ಕಾರ್ಪಣ್ಯಗಳ ಅರಿತವ, ಸ್ವತಃ ನೊಂದವ
ಸರ್ವರ ಅಭಿವೃದ್ಧಿಗಾಗಿ ಯೋಚಿಸಿದೆ,
ಯೋಜಿಸಿದೆ, ದುಡಿದೆ ಹಗಲಿರುಳೆನ್ನದೆ
ಜಾತಿ, ಮತ, ಧರ್ಮ, ಬಣ್ಣ, ಲಿಂಗಬೇಧಗಳ
ಮೆಟ್ಟಿ, ಮೀರಿ ನಿಂತೆ, ಚಿಂತಿಸಿದೆ,
ಭೋದಿಸಿದೆ, ಬಾಳಲಿ ಅಳವಡಿಸಿದೆ
ಎಂದೂ, ಯಾರಿಗೂ, ಯಾವುದೇ ಆಮಿಷ
ಆಶೆಗಳಿಗೆ ಶರಣಾಗಲಿಲ್ಲ, ನಿನ್ನದೇ ಆದ
ದಾರಿಯಲಿ ನಡೆದೆ, ಜಗತ್ತಿನಾದ್ಯಂತ
ಹೊಸ ಹೊಸ ಅವಿಷ್ಕಾರ–ಯೋಚನೆಗಳಿಗೆ
ಪ್ರಚೋದನೆ, ನೀಡಿದೆ, ಹೊಳೆವ
ಕಣ್ಣುಗಳ ಕಾಂತಿಯಿಂದ ಸರಳ
ಸೌಜನ್ಯದ ನುಡಿಗಳಿಂದ, ಬಂದ
ಹಾಗೆ ಹೋಗಿ ಬಿಟ್ಟೆ ಅದೆಲ್ಲಿಗೋ
ಇದ್ದಕ್ಕಿದ್ದಂತೆ ಯಾವ ಸುಳಿವೂ ಇಲ್ಲದೆ !

***ಸಖಾರಾಮ ಉಪ್ಪೂರು***

# ದಿನಕರ ಮತ್ತು ದೆಹಲಿ ಕರ್ನಾಟಕ ಸಂಘದಿಂದ ಶಶಿಧರ ಮುನುವಳ್ಳಿರವರಿಗೆ ಬೀಳ್ಕೊಡುಗೆ



ದೆಹಲಿ ಕರ್ನಾಟಕ ಸಂಘದ ಅಜೀವ ಸದಸ್ಯರಾದ ಶ್ರೀ ಶಶಿಧರ ಮುನುವಳ್ಳಿಯವರು ದೆಹಲಿಯ ಕರ್ನಾಟಕ ಭವನ, ಮತ್ತು ಕೇಂದ್ರ ಸರ್ಕಾರದ ವಿವಿಧ ಮಂತ್ರಾಲಯಗಳಲ್ಲಿ 1990ರಿಂದ ತಮ್ಮ ಸುಮಾರು 25 ವರ್ಷಗಳ ಅಮೂಲ್ಯ ಸೇವೆ ಸಲ್ಲಿಸಿ, 2015ರ ಜುಲೈ 31 ರಂದು ಕರ್ನಾಟಕ ಭವನ, ದೆಹಲಿಯ ಸಹಾಯಕ ಸಮನ್ವಯ ಅಧಿಕಾರಿ ಸ್ಥಾನದಿಂದ ನಿವೃತ್ತರಾದರು.

ಅವರು ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದಿದ್ದು, ಸಕ್ರಿಯವಾಗಿ ತಮ್ಮನು ತಾವು ತೊಡಗಿಸಿಕೊಂಡಿದ್ದರು. ಅವರು ತುಂಬಾ ಸ್ನೇಹಜೀವಿ ಹಾಗು ಸಂಘಜೀವಿಯಾಗಿದ್ದು ಎಲ್ಲರೊಡನೆ ಬೆರೆಯುತ್ತಿದ್ದರು. ರಂಗಭೂಮಿಯಲ್ಲಿ ಅತೀವ ಆಸಕ್ತಿಹೊಂದಿದ್ದ ಅವರು ದೆಹಲಿಯಲ್ಲಿ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಇತ್ತೀಚಿಗೆ ದಿನಕರ ಪ್ರಸ್ತುತಿ ಪಡಿಸಿದ ರಕ್ತರಾತ್ರಿ ಪೌರಾಣಿಕ ನಾಟಕದಲ್ಲಿ ಅಶ್ವತ್ಥಾಮನ ಪಾತ್ರದಲ್ಲಿ ತಮ್ಮ ಅಭೂತಪೂರ್ವ ಅಭಿನಯದ ಮೂಲಕ ಪ್ರೇಕ್ಷಕರ ಮೆಚ್ಚುಗೆ ಪಡೆದರು. 29 ಜುಲೈ 2015ರಂದು ದಿನಕರ ಹಾಗು ದೆಹಲಿ ಕರ್ನಾಟಕ ಸಂಘದ ವತಿಯಿಂದ ಅವರ ಸ್ನೇಹಿತರು ಅವರಿಗೆ ಬೀಳ್ಕೊಡುಗೆ ಕೊಡುವ ಮೂಲಕ ಭಗವಂತನು ಅವರಿಗೆ ಆಯಸ್ಸು ಹಾಗು ಆರೋಗ್ಯ ಕೊಟ್ಟು ಜೀವನ ಸುಖಕರವಾಗಿರಲೆಂದು ಶುಭಹಾರೈಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಅವರು ತಮ್ಮ ದೆಹಲಿಯ ಅನುಭವಗಳನ್ನು ಭಾವನಾತ್ಮಕವಾಗಿ ಹಂಚಿಕೊಂಡರು. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ ಎಂ., ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ದಿನಕರ ತಂಡದ ಶ್ರೀ ಶಿವಾನಂದ ಇಂಗಳೇಶ್ವರ ಮತ್ತು ಇತರ ಸದಸ್ಯರು ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅ

***ಆಶಾಲತಾ ಮಹಾದೇವ.***

# ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ ಮೆಡಿಕಲ್ ಪಿಕ್‌ನಿಕ್

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ ವತಿಯಿಂದ ದೆಹಲಿಯ ಶಾಂತಿನಿಕೇತನದಲ್ಲಿರುವ ಶಾರ್ಪ್ ಸೈಟ್‌ಸೆಂಟರ್‌ನಲ್ಲಿ ಮೆಡಿಕಲ್ ಪಿಕ್‌ನಿಕ್‌ನ್ನು ಜುಲೈ 22ರಂದು ಆಯೋಜಿಸಲಾಗಿತ್ತು. ಸರ್ಜನ್ ಡಾ. ಸಮೀರ್ ಸೂದ್ ಹಾಗೂ ಡಾ. ಶೀತಲ್ ಅವರು ಅಸೋಸಿಯೇಷನ್ ಸದಸ್ಯೆಯರೆಲ್ಲರಿಗೂ ಕಣ್ಣಿಗೆ ಸಂಬಂಧಿಸಿದ ಖಾಯಿಲೆಗಳಾದ ಕಣ್ಣಿನ ಪೊರೆ, ಗ್ಲೂಕೊಮಾ, ಲಸಿಕ್ ಸರ್ಜರಿ, ಕಣ್ಣಿನ ಪರೀಕ್ಷೆ ಇತ್ಯಾದಿ ವಿಷಯಗಳ ಬಗ್ಗೆ ವಿವರಿಸಿದರು. ಎಲ್ಲಾ ಸದಸ್ಯೆಯರಿಗೂ ಉಚಿತ ಕಣ್ಣಿನ ಪರೀಕ್ಷೆ ಮಾಡಿಸಲಾಯಿತು. ಅ

***ದೀನಾ ಜಾಯ್ಸ್***





ಚಲನಚಿತ್ರ ನಿರ್ಮಾಪಕ ಶ್ರೀ ರಾಜೇಂದ್ರ ಸಿಂಗ್ ಬಾಬು ಅವರು 8 ಜುಲೈ 2015ರಂದು ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದಾಗ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಸ್ವಾಗತಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರುಗಳಾದ ಶ್ರೀ ಬಿ.ಕೆ. ಬಸವರಾಜು, ಶ್ರೀಮತಿ ಆಶಾಲತ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಕೋಶಾಧಿಕಾರಿ ಡಾ. ಅವನೀಂದ್ರನಾಥ್ ರಾವ್ ವೈ. ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ರಾಧಾಕೃಷ್ಣ ಮತ್ತಿತರ ಸಕ್ರಿಯ ಸದಸ್ಯರುಗಳು ಉಪಸ್ಥಿತರಿದ್ದರು.

**ಕಲೆ ಮತ್ತು ಸಂಸ್ಕೃತಿ**

# ಜಯಪ್ರಕಾಶ್ ಪುತ್ತೂರು ವಿಶ್ವ ಕನ್ನಡ ಸಾಂಸ್ಕೃತಿಕ ಸಮ್ಮೇಳನದಲ್ಲಿ



ಕೆನಡಾ ದೇಶದ ಟೊರೆಂಟೋ ನಗರದಲ್ಲಿ ಸ್ಥಳೀಯ ಕನ್ನಡ ಕಸೂರಿ ರೇಡಿಯೋ ಚಾನೆಲ್, ಬಿ.ವಿ. ಟೆಲಿಕಮ್ಯುನಿಕೇಶನ್ ಲಿಮಿಟೆಡ್ ಹಾಗೂ ಮಂಗಳೂರಿನ ಮಾಸಪತ್ರಿಕೆ ಹೃದಯವಾಹಿನಿ ಪತ್ರಿಕೆ ಆಶ್ರಯದಲ್ಲಿ ಜೂನ್ 27 ಮತ್ತು 28ರಂದು ಜರಗಿದ 11ನೇ ವಿಶ್ವ ಕನ್ನಡ ಸಾಂಸ್ಕೃತಿಕೆ ಸಮ್ಮೇಳನದಲ್ಲಿ ದೆಹಲಿ ಕರ್ನಾಟಕ ಸಂಘದ ಸದಸ್ಯ ಪುತ್ತೂರಿನವರಾದ ಜೇಸಿಸ್‌ನ ಅಂತರರಾಷ್ಟ್ರೀಯ ತರಬೇತುದಾರರಾದ, ಕನ್ನಡ ಲೇಖಕ ಶ್ರೀ ಜಯಪ್ರಕಾಶ್ ರಾವ್ ಕವಿಗೋಷ್ಠಿ ಹಾಗೂ ಇನ್ನಿತರ ಸಭಾಕಲಾಪಗಳಲ್ಲಿ ಯಶಸ್ವಿಯಾಗಿ ಪಾಲುಗೊಂಡಿದ್ದಾರೆ.

ಈ ಅಂತರರಾಷ್ಟ್ರೀಯ ಸಮ್ಮೇಳನದ ಅಧ್ಯಕ್ಷತೆಯನ್ನು ಕನ್ನಡ ಅಭಿಪ್ರಾಧಿಕಾರದ ಡಾ. ಹನುಮಂತಪ್ಪನವರು ವಹಿಸಿದ್ದು, ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಮಾನ್ಯಮಂತ್ರಿಗಳಾದ ಶ್ರೀ ಆಂಜನೇಯನಪ್ಪನವರು ಉದ್ಘಾಟಿಸಿದರು. ಕರ್ನಾಟಕ ರಾಜ್ಯದಿಂದ 35ಜನರ ಕಲಾವಿದ ತಂಡ ಅಲ್ಲಿ ವಿವಿಧ ಸಾಂಸ್ಕೃತಿಕ ಕಲೆಗಳನ್ನು ಪ್ರದರ್ಶಿಸಿದರು. ಈ ತಂಡದಲ್ಲಿ ನಾಡಿನ ಹೆಸರಾಂತ ಜನಪದ ಗಾಯಕ ಡಾ. ಕಿಕ್ಕೇರಿ ಕೃಷ್ಣಮೂರ್ತಿ ಮುಂತಾದವರು ಪಾಲುಗೊಂಡಿದ್ದರು. ಅ

ದೆಹಲಿ ಕರ್ನಾಟಕ ಸಂಘದಲ್ಲಿ ಕನ್ನಡ ಚಲನಚಿತ್ರಗೀತೆಗಳ ಕಾರ್ಯಕ್ರಮವೊಂದನ್ನು ದೆಹಲಿಯ ಕನ್ನಡದ ಹಾಡುಗಾರರಿಂದ ಆಯೋಜಿಸುವ ಬಗ್ಗೆ ಯೋಚಿಸಲಾಗುತ್ತಿದೆ. ಸಂಗೀತದ ಟ್ರ್ಯಾಕ್ (ಕರೋಕೆ)ಗೆ ಹಾಡುವವರಿಗೆ ಮಾತ್ರ ಅವಕಾಶ.
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ ಶ್ರೀಮತಿ ಪೂಜಾರಾವ್ : 9810882498

***ಪ್ರಧಾನ ಕಾರ್ಯದರ್ಶಿ***

**ಶ್ರೀ ಶ್ರೀ ರಾಘವೇಂದ್ರ ಸಾರ್ವಭೌಮರ**
**344ನೇಯ ಆರಾಧನ ಮಹೋತ್ಸವ**

ಶ್ರೀ ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠ, ಸೆಕ್ಟರ್–12, ಆರ್.ಕೆ.ಪುರಂ, ನವದೆಹಲಿ.
ಆಗಸ್ಟ್ 30 ರಿಂದ ಸೆಪ್ಟೆಂಬರ್ 1ರವರೆಗೆ
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : 26172892

ಮಧ್ವ ಸಂಘ, ಎ2/117, ಸಫ್ದರ್‌ಜಂಗ್ ಎನ್‌ಕ್ಲೇವ್, ನವದೆಹಲಿ–ಮಧ್ಯಾರಾಧನೆ, ಆಗಸ್ಟ್ 31, 2015. ಆರಾಧನಾ ಮಹೋತ್ಸವದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಹರಿವಾಯುಗುರುಗಳ ಅನುಗ್ರಹಕ್ಕೆ ಪಾತ್ರರಾಗಬಹುದು.

# ಭಾರತದ ಹೆಮ್ಮೆಯ ಪುತ್ರ
# ಡಾ. ಎ.ಪಿ.ಜೆ. ಅಬ್ದುಲ್ ಕಲಾಂ



ಕಡಲ ಹಕ್ಕಿಯೊಂದು ಎಲ್ಲ ಸಂಬಂಧಗಳನ್ನು ಹಿಂದೆ ಬಿಟ್ಟು ಒಂಟಿಯಾಗಿ ಮುಂದಿನ ನೆಲೆಗೂಡುಗಳ ಕುರಿತು ಚಿಂತಿಸದೆ ಹಾರುತ್ತದೆ. ಅದೇ ರೀತಿ ನೀನು ಕೂಡಾ ನಿನ್ನ ಹೊಕ್ಕುಳ ಬಳ್ಳಿಯಿಂದ ಬಿಡಿಸಿಕೊಂಡು ನಿನ್ನ ಕನಸುಗಳನ್ನು ಹುಡುಕಿಕೊಂಡು ಎಷ್ಟು ಎತ್ತರ ಹಾರಬಲ್ಲೆಯಾ ಅಷ್ಟು ದೂರ ಹೋಗಿ ಬಾ ಎಂದು ಎಳೆಯ ಬಾಲಕ ಅಬ್ದುಲ್ ಕಲಾಂಗೆ ಅವರ ತಂದೆ ಹೇಳುತ್ತಾರೆ. ಶಿಕ್ಷಣದಲ್ಲಿ ಅಪಾರ ಆಸಕ್ತಿಯಿದ್ದ ಅಬ್ದುಲ್ ಕಲಾಂ ಶ್ರೀಮಂತ ಕುಟುಂಬದಲ್ಲಿ ಹುಟ್ಟಿರಲಿಲ್ಲ. ಆದರೆ ಸಾಧಾರಣ ವಿದ್ಯಾರ್ಥಿಯಾಗಿದ್ದರೂ, ತನ್ನ ಬುದ್ಧಿವಂತಿಕೆ ಹಾಗೂ ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸವನ್ನು ಮುಂದುವರಿಸಿದರು.

ತಮಿಳುನಾಡಿನ ರಾಮೇಶ್ವರಂನ ಧನುಷ್ಕೋಟಿಯಲ್ಲಿ ಅಕ್ಟೋಬರ್ 15, 1931 ರಂದು ಜನಿಸಿದ ಅವುಲ್ ಫಕೀರ್ ಜೈನುಲಾಬ್ದೀನ್ ಕಲಾಂ ಅವರು ಜುಲೈ 25, 2002ರಂದು ಭಾರತದ ಹನ್ನೊಂದನೆಯ ರಾಷ್ಟ್ರಪತಿಯಾದರು. ಶಿಲ್ಲಾಂಗ್‌ನ ಇಂಡಿಯನ್ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಜುಲೈ 27, 2015ರ ಸಂಜೆ ಅವರು ಉಪನ್ಯಾಸ ನೀಡುತ್ತಿದ್ದಾಗಲೇ ದಿಢೀರನೆ ಕುಸಿದುಬಿದ್ದು, ಅಸ್ವಸ್ಥಗೊಂಡರು. ಕೂಡಲೇ ಅವರನ್ನು ನಾನ್‌ಗ್ರಿಮ್ ಹಿಲ್ಸ್‌ನಲ್ಲಿರುವ ಬೆಥನಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಅವರು ನಿಧನರಾದರು.

ಆರ್ಥಿಕ ಬಡತನದಿಂದ ಸಾಗುತ್ತಿದ್ದ ಅವರ ಬಾಲ್ಯದಲ್ಲಿ ಕಲಾಂ ಅವರು ಮುಂಜಾನೆ ನಾಲ್ಕು ಘಂಟೆಗೆ ಎದ್ದು ದಿನದ ಪಾಠಗಳನ್ನು ಓದಿ ಶಾಲೆಗೆ ಹೋಗುತ್ತಿದ್ದರು. ಜತೆಗೆ ದಿನಪತ್ರಿಕೆ ಮಾರಾಟ ಮಾಡಿ ಬಂದ ಹಣದಿಂದ ತಂದೆಗೆ ಆರ್ಥಿಕವಾಗಿ ಸಹಾಯ ಮಾಡುತ್ತಿದ್ದರು. ಅವರ ತಂದೆಯು ದೋಣಿಯಲ್ಲಿ ರಾಮೇಶ್ವರದ ಭಕ್ತರನ್ನು ದಡ ಮುಟ್ಟಿಸಿ ಬರುವ ಹಣದಿಂದ ಜೀವನ ಸಾಗಿಸುವ ಕುಟುಂಬ ಅವರದಾಗಿತ್ತು. ರಾಮೇಶ್ವರದಲ್ಲಿ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸ ಮುಗಿಸಿದ ಅವರು ಮಾಧ್ಯಮಿಕ ವಿದ್ಯಾಭ್ಯಾಸಕ್ಕಾಗಿ ರಾಮನಾಥಪುರಕ್ಕೆ ಹೋದರು. ಅಬ್ದುಲ್ ಕಲಾಂ ಗಣಿತವನ್ನು ತುಂಬಾ ಆಸಕ್ತಿಯಿಂದ ಕಲಿಯುತ್ತಿದ್ದರು. ಅವರು ಸಂತ ಜೋಸೆಫ್ ಕಾಲೇಜಿನಲ್ಲಿ ಭೌತಶಾಸ್ತ್ರದಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಿದರು. 1958ರಲ್ಲಿ ಮದ್ರಾಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನೋಲಜಿ ಯಿಂದ ವೈಮಾನೀಕ ಇಂಜಿನೀಯರಿಂಗ್‌ನಲ್ಲಿ ಪದವಿಯನ್ನು ಪಡೆದ ಅವರು ಎಂ.ಟೆಕ್. ಮತ್ತು ಪಿ.ಎಚ್.ಡಿ. ಪದವಿಗಳನ್ನು ಪಡೆದಿದ್ದರು.

ವ್ಯಾಸಂಗ ಮುಗಿಸಿದ ಅಬ್ದುಲ್ ಕಲಾಂ, ಮುಂದೆ ನಾಲ್ಕು ದಶಕಗಳ ಕಾಲ ವಿಜ್ಞಾನಿಯಾಗಿ, ವೈಜ್ಞಾನಿಕ ನಿರ್ವಾಹಕರಾಗಿ ಡಿಫೆನ್ಸ್ ರಿಸರ್ಚ್ ಅಂಡ್ ಡೆವಲಪ್ಮೆಂಟ್ ಆರ್ಗನೈಸೇಷನ್ ಮತ್ತು ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋದಲ್ಲಿ ಭಾರತದ ನಾಗರಿಕ ಬಾಹ್ಯಾಕಾಶ ಯೋಜನೆಗಳಲ್ಲಿ ಗಣನೀಯವಾದ ಸಾಧನೆ ಮಾಡಿದರು. ಸೇನಾ ಪಡೆಗಳಿಗೆ ಅತ್ಯಂತ ಅವಶ್ಯಕವಾದ ಶಕ್ತಿಯುತ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹಾಗೂ ಉಡಾವಣಾ ವಾಹನಗಳನ್ನು ತಯಾರಿಸಿ ವಿಶ್ವದಲ್ಲೇ ಅತ್ಯಂತ ಮುಂದುವರಿದ ಕ್ಷಿಪಣಿಗಳನ್ನು ತಯಾರಿಸುವ ಸಾಮಾರ್ಥ್ಯವನ್ನು ಭಾರತವು ಹೊಂದುವಂತೆ ಮಾಡಿದರು. ಅವರು 1998 ರಲ್ಲಿ ಪೋಕ್ರಾನ್ ಅಣ್ವಸ್ತ್ರ ಪರೀಕ್ಷೆಯನ್ನು ನಡೆಸಿ ಇಡೀ ವಿಶ್ವವೇ ಬೆರಗಾಗುವಂತೆ ಮಾಡಿದರು.

ರಾಷ್ಟ್ರಪತಿ ಪದವಿಗೆ ಹೊಸ ಅರ್ಥವನ್ನೂ ಹೊಸ ಹೊಳಹನ್ನೂ ನೀಡಿ ಅದಕ್ಕೆ ಮತ್ತೊಂದು ರೀತಿಯ ಘನತೆ ತಂದು ಕೊಟ್ಟರು ಕಲಾಂ. ರಾಷ್ಟ್ರಪತಿ ಭವನ ಪ್ರವೇಶಿಸಿದ ಬಳಿಕ ಅವರು ಸುಮ್ಮನೆ ಕೂರಲಿಲ್ಲ. ಭಾರತದಂತಹ ದೊಡ್ಡ ದೇಶಕ್ಕೆ ದೊಡ್ಡ ಕನಸು ಕಟ್ಟುವ ಉತ್ಸಾಹ ಮೂಡಿಸಿದರು. ಇದು ಸಾಧ್ಯವಾಗುವುದು ಮುಂದಿನ ಪೀಳಿಗೆಯನ್ನು ಸರಿಯಾಗಿ ರೂಪಿಸಿದಾಗಲೇ ಎನ್ನುವುದನ್ನು ಅರಿತು ಮಕ್ಕಳಿಗೂ ಯುವಕರಿಗೂ ಸ್ಫೂರ್ತಿ ತುಂಬುವ ಕೆಲಸಕ್ಕೆ ಮಾಡಿದರು. ರಾಷ್ಟ್ರಪತಿ ಆದ ನಂತರ ಅವರು ರಾಷ್ಟ್ರಪತಿ ಭವನದತ್ತ ಸಾಮಾನ್ಯ ಜನರು ಬರುವಂತೆ ಮಾಡಿದರು. ಸಂಸದರನ್ನು ರಾಷ್ಟ್ರಪತಿ ಭವನಕ್ಕೆ ಕರೆದು ಅವರಿಗೂ ಅಭಿವೃದ್ಧಿಯ ಬಗ್ಗೆ ಉಪನ್ಯಾಸ ನೀಡುತ್ತಿದರು. ವಿದ್ಯಾರ್ಥಿಗಳಲ್ಲಿ ಭವಿಷ್ಯದ ಭಾರತದ ಕನಸುಗಳನ್ನು ರೂಪಿಸುವ ಗುರುವಾಗಿದ್ದ ನಿಧನರಾಗುವವರೆಗೂ ಅದೇ ಕೆಲಸದಲ್ಲಿ ತೊಡಗಿಸಿಕೊಂಡಿದ್ದರು. ಕನಸೆಂದರೆ ನಿದ್ದೆ ಮಾಡುವಾಗ ಬೀಳುವ ಕನಸಲ್ಲ. ನಿದ್ದೆ ಮಾಡಲು ಬಿಡದ ಕನಸು ಎನ್ನುತ್ತಿದ್ದ ಕಲಾಂ ಅವರು ದೊಡ್ಡ ಕನಸು ಕಾಣಬೇಕು, ಅವುಗಳನ್ನು ಸಾಧಿಸಲು ಕಠಿಣವಾಗಿ ಶ್ರಮಿಸಬೇಕು ಎಂದು ಮಕ್ಕಳಿಗೆ ಹೇಳುತ್ತಿದ್ದರು. ಈ ದೇಶದ ಭವಿಷ್ಯವಿರುವುದು ಯುವಕರ ಕೈಯಲ್ಲಿ ಎಂದು ಬಲವಾಗಿ ನಂಬಿದ್ದ ಅವರು ಜೀವನದುದ್ದಕ್ಕೂ ಯುವ ಮನಸುಗಳನ್ನು ಪ್ರೇರೇಪಿಸುವ ಕೆಲಸವನ್ನು ಮಾಡಿದರು. ರಾಷ್ಟ್ರಪತಿಯಾಗಿರುವಾಗಲೂ ಇಲ್ಲದಾಗಲೂ ಶಾಲೆ, ಕಾಲೇಜುಗಳಿಗೆ ಹೋಗಿ ಮಕ್ಕಳಲ್ಲಿ ಹೊಸ ಕನಸುಗಳನ್ನು ಬಿತ್ತಿದರು.


ಅವರ ಮಹತ್ವದ ಕೆಲವು ಪುಸ್ತಕಗಳು ವಿಜ್ಞಾನ ಮತ್ತು ಬದುಕಿನ ಸವಾಲುಗಳ ಕುರಿತಾಗಿವೆ. ಡೆವೆಲಪ್‌ಮೆಂಟ್ ಇನ್ ಫ್ಲುಯಿಡ್ ಮೆಕಾನಿಕ್ ಅಂಡ್ ಸ್ಪೇಸ್ ಟೆಕ್ನಾಲಜಿ, ವಿಂಗ್ಸ್ ಆಫ್ ಫಯರ್, ಇಂಡಿಯಾ 2020, ಇಗ್ನೈಟೆಡ್ ಮೈಂಡ್ಸ್, ಎನ್ವಿಶನಿಂಗ್ ಅನ್ ಎಂಪವರ್ಡ್ ನೇಷನ್, ಮೈ ಜರ್ನೀ, ದಿ ಲೈಫ್ ಟ್ರೀ ಬಹಳ ಮುಖ್ಯವಾದವು. ಅವರಿಗೆ 1997 ರಲ್ಲಿ ಭಾರತರತ್ನ ಪ್ರಶಸ್ತಿಯ ಗೌರವ ದೊರಕಿತು. ಅವರ ಸಾಧನೆಗಳಿಗಾಗಿ ಅವರು ವಿಶ್ವದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಿಂದ ಹಲವಾರು ಡಾಕ್ಟರೇಟ್ ಪದವಿಗಳನ್ನು ಪಡೆದಿದ್ದಾರೆ. ಜತೆಗೆ ಪದ್ಮ ವಿಭೂಷಣ, ಪದ್ಮ ಭೂಷಣ ಅಲ್ಲದೇ ಅಮೆರಿಕದ ಹೂವರ್ ಪ್ರಶಸ್ತಿಯೂ ಅವರಿಗೆ ದೊರೆತಿದೆ.

ಅವಿವಾಹಿತರಾಗಿದ್ದ ಡಾ. ಅಬ್ದುಲ್ ಕಲಾಂ ಅವರಿಗೆ ಮಕ್ಕಳೆಂದರೆ ಅತ್ಯಂತ ಪ್ರೀತಿ. ಮಕ್ಕಳಿಗೂ ಅವರು ಅಚ್ಚುಮೆಚ್ಚಿನವರಾಗಿದ್ದರು. ಎಲ್ಲಾ ವಯಸ್ಸಿನ ಮಕ್ಕಳು ಮತ್ತು ಯುವಕರು ಅವರಿಂದ ಬಹಳಷ್ಟು ಪ್ರೇರಣೆಯನ್ನು ಪಡೆಯುತ್ತಿದ್ದರು. ಬದುಕಿನ ಸವಾಲುಗಳ ಕುರಿತು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಮಕ್ಕಳಲ್ಲಿ ಹೊಸ ಚಿಂತನೆಗಳನ್ನು ಅವರು ಮೂಡಿಸುತ್ತಿದ್ದರು. ತಮ್ಮಲ್ಲಿದ್ದ ಜ್ಞಾನವನ್ನು ಹಂಚುವುದಲ್ಲದೇ ಹೊಸ ಜ್ಞಾನವನ್ನು ಪಡೆಯುವ ಉಪಾಯಗಳನ್ನು ಅವರು ತಿಳಿಸುತ್ತಿದ್ದರು. ಯುವಕರೊಡನೆ ಅವರು ಗಂಟೆಗಟ್ಟಲೇ ಮಾತಾಡಿ ಹುರಿದುಂಬಿಸುತ್ತಿದ್ದರು.

ಅವರೊಬ್ಬ ಕರ್ಮಯೋಗಿ. ಅಪ್ಪಟ ದೇಶಭಕ್ತ. ಸುಭದ್ರ ಭಾರತದ ಕನಸು ಕಂಡವರು. ಕೋಟ್ಯಾಂತರ ಯುವಕರಿಗೆ ಕನಸುಗಳನ್ನು ಕಟ್ಟಿಕೊಟ್ಟ, ದೇಶಕ್ಕಾಗಿ ದುಡಿಯಲು ಸದಾ ಪ್ರೇರಣೆ ನೀಡುತ್ತಿದ್ದ ಒಬ್ಬ ಮಹಾನ್ ನಾಯಕ. ಡಾ. ಕಲಾಂ ಅವರ ಜೀವನ ಚರಿತ್ರೆ ಎಲ್ಲರಿಗೂ ಪ್ರೇರಣೆ ನೀಡುವಂಥದ್ದು. ತಮ್ಮ ಕನಸುಗಳಿಗೆ ರೆಕ್ಕೆ ಕಟ್ಟಿಕೊಂಡ ಕಲಾಂ ಜೀವನದಲ್ಲಿ ಅಪಾರವಾದ ಯಶಸ್ಸಿನ ಮೆಟ್ಟಿಲುಗಳನ್ನು ಹತ್ತಿದರು. ಕಲಾಂ ಓರ್ವ ವಿಜ್ಞಾನಿಯಾಗಿರುವ ಜತೆಗೆ ತನ್ನ ಮಾತೃಭಾಷೆ ತಮಿಳಿನಲ್ಲಿ ಕವಿತೆಗಳನ್ನು ಬರೆಯುತ್ತಿದ್ದರು. ಅವರು ಉತ್ತಮ ವೀಣಾ ವಾದ್ಯಗಾರರು ಆಗಿದ್ದರು.

ತಮ್ಮ ವಿಶ್ರಾಂತ ಜೀವನದಲ್ಲೂ ಅವಿಶ್ರಾಂತವಾಗಿ ದುಡಿಯುತ್ತಿದ್ದ ಕಲಾಂ ಅವರು ಯುವಜನಾಂಗಕ್ಕೆ ಒಬ್ಬ ಮಾದರಿ. ಮುಂದಿನ ಪೀಳಿಗೆಗೆ ಉತ್ತಮವಾದ ಸಂದೇಶಗಳನ್ನು ನೀಡಿರುವ ಅವರ ಜೀವನಾದರ್ಶಗಳನ್ನು ಅನುಸರಿಸಿಕೊಂಡು ದೇಶಕ್ಕೋಸ್ಕರ ನಮ್ಮ ಜೀವನವನ್ನು ಮುಡಿಪಾಗಿಡಲು ಅವರು ಪ್ರೇರೇಪಿಸಿದ್ದಾರೆ. ಅವರಿಗೆ ಶ್ರದ್ಧಾಂಜಲಿ. ಅ

**ಅಭಿಮತ ವರದಿ**



ಚಿತ್ರಕಲೆ: ವಿಲಾಸ್ ನಾಯಕ್


# ಅಗ್ನಿ ಮತ್ತು ಪೃಥ್ವಿ

ಜೈನುಲಾಬುದ್ದೀನ್ ದಿನ ನಿತ್ಯ ದೋಣಿಯಲ್ಲಿ ಭಕ್ತರನ್ನು ಧನುಷ್ಕೋಟಿಯಿಂದ ರಾಮೇಶ್ವರಕ್ಕೆ ಕರೆ ತರುತ್ತಿದ್ದರೆ, ಬಾಲಕ ಅಬ್ದುಲ್ ಕಲಾಂ ಓದಲೆಂದು ಶಾಲೆಗೆ ಹೋಗುವುದರ ಜತೆಗೆ ಮುಂಜಾನೆಯ ಹೊತ್ತಿಗೆ ಪತ್ರಿಕೆಗಳನ್ನು ಹಂಚುತ್ತಿದ್ದ. ಐದು ಮಕ್ಕಳು ಮತ್ತು ತಂದೆ ತಾಯಿಯರು ಇದ್ದ ಆ ಕುಟುಂಬದ ಹಿರಿಯರು ಒಂದು ಕಾಲದಲ್ಲಿ ಶ್ರೀಮಂತ ವ್ಯಾಪಾರಿಗಳಾಗಿದ್ದರು. ಆದರೆ ಇಂದಿನ ತಲೆಮಾರು ಬಡತನದಲ್ಲಿ ಬದುಕನ್ನು ಆರಂಭಿಸಿತು. ಕಿತ್ತು ತಿನ್ನುವ ಬಡತನದ ಎದುರು ವಿದ್ಯೆಯು ಗೆಲ್ಲಬಹುದು ಎಂದು ಎಳವೆಯಲ್ಲಿಯೇ ಕಲಾಂ ಅರಿತಿದ್ದರು. ವಿದ್ಯೆಯನ್ನು ಅರಸುತ್ತಾ ಅವರು ಪ್ರತಿಷ್ಠಿತ ಮದರಾಸು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಏರೋಸ್ಪೇಸ್‌ನಲ್ಲಿ ಪದವೀಧರರಾದರು.

ತಮ್ಮ ಸರಳತೆ ಮತ್ತು ಅಪಾರ ಜ್ಞಾನಗಳಿಂದ ದೇಶಾದ್ಯಂತ ಎಲ್ಲರ ಮೆಚ್ಚುಗೆಯವರಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಜುಲೈ 27ರಂದು ನಿಧನಗೊಂಡಾಗ ಭಾರತವಿಡೀ ತನ್ನ ಅಪೂರ್ವವಾದ ರತ್ನವನ್ನು ಕಳಕೊಂಡಂತಹ ಪರಿಸ್ಥಿತಿಯಲ್ಲಿತ್ತು. ವಿನೋಬಾ ಭಾವೆ, ಮಹಾತ್ಮ ಗಾಂಧಿ, ಮದರ್ ಥೆರೆಸಾರಂತೆ ಪರರಿಗಾಗಿ ಬದುಕಿ ತನಗೇನೂ ಮಾಡದವರ ಸಾಲಿನಲ್ಲಿ ಅಬ್ದುಲ್ ಕಲಾಂ ಅವರನ್ನು ಕಾಣಬಹುದು. ಅವರ ಬದುಕಿದ ಆದರ್ಶಗಳಲ್ಲಿ ಕೆಲವನ್ನಾದರೂ ನಮ್ಮ ಬದುಕಿನಲ್ಲಿ ಅಳವಡಿಸುವುದು ನಾವು ಅವರಿಗೆ ನೀಡಬಹುದಾದ ದೊಡ್ಡ ಶ್ರದ್ಧಾಂಜಲಿ.

ದೆಹಲಿಯ ಸುಡುಬಿಸಿಲನ್ನು ಮರೆಸುವಂತೆ ಕವಿದ ಮೋಡ ಮಳೆಯಾಗಿ ಸುರಿದಿದೆ. ದೆಹಲಿ ಕರ್ನಾಟಕ ಸಂಘದ ಹೊಸ ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನೆ 2005ರ ಎಪ್ರಿಲ್ 16ರಂದು ನಡೆದು ನಾವಿಂದು ದಶಮಾನೋತ್ಸವವನ್ನು ಸಂಭ್ರಮದಿಂದ ಆಚರಿಸುತ್ತಿದ್ದೇವೆ. ಅಭಿಮತದ ಓದುಗರು ನಿರೀಕ್ಷಿಸುತ್ತಿರುವ ವಿಶೇಷಾಂಕದ ಕೆಲಸವೂ ನಡೆಯುತ್ತಿದೆ. ಅ

***ಬಾಲಕೃಷ್ಣ ನಾಯ್ಕ್ ಡಿ.***




## ಅಭಿಮತವು ಸಂಗ್ರಹ ಯೋಗ್ಯ ಪತ್ರಿಕೆ

'ದೆಹಲಿ ಕರ್ನಾಟಕ ಸಂಘ'ದ 'ಅಭಿಮತ' ಪ್ರತಿ ತಿಂಗಳು ತಪ್ಪದೆ ಬಂದು ಸೇರುವುದು. 2007ರಲ್ಲಿ ಬೇಂದ್ರೆ ಟ್ರಸ್ಟ್‌ನ 'ಅಂಬಿಕಾತನಯದತ್ತ' ಪ್ರಶಸ್ತಿ ಈ ಸಂಘಕ್ಕೆ ಸಂದಿತ್ತು. ಆಗಿನಿಂದ 'ಅಭಿಮತ'ವು ಟ್ರಸ್ಟ್‌ನೊಂದಿಗೆ ನಂಟನ್ನು ಇಟ್ಟುಕೊಂಡಿದೆ.

ಪತ್ರಿಕೆಯ ಮುದ್ರಣ ವಿನ್ಯಾಸಕ್ಕೆ ಹೆಚ್ಚಿನ ಗುಣಾಂಕ ಸಲ್ಲಬೇಕು. ಸಚಿತ್ರ ಸುದ್ದಿಗಳನ್ನು ತೋರಿಸುವ ಸಂಚಿಕೆ, ದೆಹಲಿಯಲ್ಲಿ ಕನ್ನಡ (ಕರ್ನಾಟಕದ ಉಪ ಭಾಷೆಗಳೂ ಸೇರಿ)–ಕನ್ನಡಿಗ–ಕರ್ನಾಟಕ ಎಷ್ಟು ಚಟುವಟಿಕೆಯಿಂದ ಇದ್ದರೆ ಮತ್ತು 'ಜಗದೇಳಿಗೆಯಾಗುವದಿದೆ ಕರ್ನಾಟಕದಿಂದೆ' ಎಂಬ ಬೇಂದ್ರೆಯವರ ಭವಿಷ್ಯವಾಣಿಯನ್ನು ನಿಜ ಮಾಡುವಂತೆ ಸಾಂಸ್ಕೃತಿಕ ಜೀವನ ದೆಹಲಿಯಲ್ಲಿ ಲವಲವಿಕೆಯಿಂದ ತುಂಬಿದೆ–ಎಂಬ ಭಾವ ನಮ್ಮಲ್ಲಿ ಹುಟ್ಟಿಸುತ್ತದೆ.

ಜೂನ್ ಸಂಚಿಕೆಯಲ್ಲಿ 'ಭಾವನೆಯ ಬಳ್ಳಿ' ಶೀರ್ಷಿಕೆಯೊಂದಿಗೆ ಪ್ರಕಟವಾದ 'ಜಾಣಗುಂಡಿಗೆ ಬಿದ್ದ ಬುದ್ಧಿವಂತರು ನಾವು' ಪ್ರಬಂಧ ಒಂದೇ ಪುಟದ ಮಿತಿಯಲ್ಲಿ, ಅಮಿತವಾದ ತಿಳುವಳಿಕೆಯನ್ನೂ ಕೊಡುವಂತಿದೆ. ದೈಹಿಕ, ಮಾನಸಿಕ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತ ನಾಗರಿಕತೆಯ ಭ್ರಮೆಯನ್ನು ತೇಲುತ್ತಿರುವ ನಾವು–ಭವಿಷ್ಯ ಜೀವನ ಹೇಗೆ ಕಂಡೇವು, ಎಂಬ ಆತಂಕ ಮತ್ತು ಸಕಾರಣವಾಗಿ ವಿವರಿಸಿದ್ದಾರೆ ಲೇಖಕಿ–ಡಾ. ಅಹಲ್ಯಾ ಚಿಂತಾಮಣಿಯವರು.

ಶಶಿಧರ ಮುನವಳ್ಳಿಯವರ ಕವನ, ಸುಧಾಕರ ಕುರಂದವಾಡ ಹಾಡು–ಸೊಗಸಾದ ಓದಿನ ಅನುಭವ ಕೊಡುವಂತಿದೆ. 'ಅಭಿಮತ' ಓದಿ, ಮೂಲೆಗೆ ಸೇರುವ ಸಂಚಿಕೆಯಾಗಿರದೆ, ಮತ್ತೆ ಮತ್ತೆ ಓದಲು, ನೋಡಲು ಸಂಗ್ರಹಿಸಿಡುವಂತಹ ಪತ್ರಿಕೆಯಾಗಿದೆ. ಇದನ್ನು ಆಗುಮಾಡುವಂತೆ ವ್ಯವಧಾನವಿರಿಸಿಕೊಂಡಿರುವ

ಅಭಿಮತ–ಸಂಪಾದಕ ಬಳಗಕ್ಕೆ ಅಭಿನಂದನೆಗಳು. ಅ

***ಶ್ಯಾಮಸುಂದರ ಬಿದರಕುಂದಿ***

## ಅನುಪಮ, ಅನನ್ಯ ಸಾಧನೆ




ಇತ್ತೀಚಿನ 'ಅಭಿಮತ' ಸಂಚಿಕೆಯಲ್ಲಿ ದೆಹಲಿ ಕರ್ನಾಟಕ ಸಂಘವು ನಿಮ್ಮ ಅಧ್ಯಕ್ಷತೆಯಲ್ಲಿ ಅನುಪಮ–ಅನನ್ಯ ಸಾಧನೆ ಸಿದ್ಧಿ ಮಾಡಿರುವ ಸುದ್ದಿಯನ್ನು ಓದಿ ನನಗೆ ಅತೀವ ಸಂತಸಾಗಿದೆ. ಜೆ.ಎನ್.ಯು.ವಿನಲ್ಲಿ ಕನ್ನಡ ಅಧ್ಯಯನ ಪೀಠ, ದೆಹಲಿ ವಿಶ್ವ ವಿದ್ಯಾಲಯದಲ್ಲಿ ಎರಡು ಕನ್ನಡ ಪ್ರಾಧ್ಯಾಪಕರ ಹುದ್ದೆ ಹಾಗೂ ಮೆಟ್ರೋ ಸ್ಟೇಶನ್ನಿಗೆ ಸರ್. ಎಂ. ವಿಶ್ವೇಶ್ವರಯ್ಯ ಅವರ ಹೆಸರು ಇವೆಲ್ಲ ನಿಜಕ್ಕೂ ಪ್ರತಿಯೊಬ್ಬ ಕನ್ನಡಿಗನೂ ಹೆಮ್ಮೆಪಟ್ಟುಕೊಳ್ಳುವ ಸುದ್ದಿ ವಿಶೇಷಗಳು. ನಿಮಗೆ ನನ್ನ ಹಾರ್ದಿಕ ಅಭಿನಂದನೆಗಳು. ದೆಹಲಿ ಕರ್ನಾಟಕ ಸಂಘದ ಇತಿಹಾಸದಲ್ಲಿಯೇ ಇದು ಸುವರ್ಣಾಕ್ಷರದಲ್ಲಿ ಬರೆದಿಡಬಹುದಾದ ಇತಿಹಾಸದ ಪುಟ. ಮತ್ತೊಮ್ಮೆ ನಿಮಗೆ ನನ್ನ ಹಾರ್ದಿಕ ಅಭಿನಂದನೆಗಳು. ಅ

***ಎನ್.ಪಿ. ಭಟ್, ಧಾರವಾಡ***

**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com

PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Aug-2015, Vol. No.25, Issue No.10, Price Rs.1/-  RNI Regn. No. 53405/91, DL-SW-1/4016/13-15
Printout Date : Aug 8th / 9th, Postal Date :10th  / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

